ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ

**Office of the District Commissioner and District Magistrate, Chitradurga**

ಸಂ. ಎಂ.ಎ.ಜಿ(1) ಸಿ.ಆರ್ 32 /2021-22 ದಿನಾಂಕ: 17.01.2022

ಉಪಸ್ಥಿತಿ

ಶ್ರೀಮತಿ ಕವಿತಾ ಎಸ್. ಮನ್ನಿಕೇರಿ, ಭಾ.ಆ.ಸೇ.

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಕಾರ್ಯನಿರ್ವಾಹಕ ದಂಡಾಧಿಕಾರಿಗಳು,

ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.

ಅರ್ಜಿದಾರ : ಪೊಲೀಸ್ ನಿರೀಕ್ಷಕರು, ಕೋಟೆ ಪೊಲೀಸ್ ಠಾಣೆ

ವಿರುದ್ಧ

ಎದುರುದಾರ : ಹೆಚ್.ಶ್ರೀನಿವಾಸ್ @ ಬಾಳೆಕಾಯಿ ಸೀನ @ ಮಚ್ಚು ಸೀನ ಲೇಟ್ ಹನುಮಂತಪ್ಪ ಸು.39 ವರ್ಷದ ಅದಿ ದ್ರಾವಿಡ ಜನಾಂಗ, ವಾಸ 02ನೇ ಹಂತ ರಾಜೀವ್ ಗಾಂಧಿ ಆಶ್ರಯ ಬಡಾವಣೆ, ಚಿತ್ರದುರ್ಗ ನಗರ.

## THE KARNATAKA PREVENTION OF DANGEROUS ACTIVITIES OF BOOTLEGGERS, DRUG-OFFENDERS, GAMBLERS, GOONDAS, [IMMORAL TRAFFIC OFFENDERS, SLUM-GRABBERS AND VIDEO OR AUDIO PIRATES] ACT, 1985 ಅಡಿಯಲ್ಲಿ ಆದೇಶ.

ಅರ್ಜಿದಾರರು, ಎದುರುದಾರರ ವಿರುದ್ಧ **ಕರ್ನಾಟಕ ಅಕ್ರಮ ಭಟ್ಟಿ ಸಾರಾಯಿ ಇಳಿಸುವವರ ಔಷಧ ಕಾನೂನು ಉಲ್ಲಂಘಿಸುವವರ ಜೂಜು ಕೋರರು, ಗೂಂಡಾಗಳು, ಅನೈತಿಕ ವ್ಯವಹಾರಗಳ ವೃತ್ತಿಯಲ್ಲಿ ತೊಡಗುವವರ, ಕೊಳಚೆ ಪ್ರದೇಶದ ಅಕ್ರಮಣದಾರರು ಇವರ ಅಪಾಯಕಾರಿ ಚಟುವಟಿಕೆಗಳ ತಡೆ ಕಾಯ್ದೆ-1985** ಅಡಿಯಲ್ಲಿ ಅರ್ಜಿ ಸಲ್ಲಿಸಿ ಎದುರುದಾರ ಒಂದು ಕೋಮಿನವರನ್ನು ರಾಜಕೀಯವಾಗಿ ಬಳಸಿಕೊಳ್ಳುತ್ತಾ ಕಾನೂನುಗಳನ್ನು ಉಲ್ಲಂಘನೆ ಮಾಡುವುದು ರಾಜ್ಯ ಮತ್ತು ಕೇಂದ್ರ ಸರ್ಕಾರದ ಆದೇಶಗಳನ್ನು ಮತ್ತು ನೀತಿ ನಿಯಮಗಳನ್ನು ಉಲ್ಲಂಘಿಸುವಂತೆ ಸ್ಥಳೀಯ ನಿವಾಸಿಗಳನ್ನು ಪ್ರಚೋದಿಸುತ್ತಾ ಠಾಣಾ ವ್ಯಾಪ್ತಿಯಲ್ಲಿ ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆಯನ್ನು ಉಂಟುಮಾಡುವ ವ್ಯಕ್ತಿಯಾಗಿರುವ **ಹೆಚ್.ಶ್ರೀನಿವಾಸ್ @ ಬಾಳೆಕಾಯಿ ಸೀನ @ ಮಚ್ಚು ಸೀನ ಲೇಟ್ ಹನುಮಂತಪ್ಪ** ಸು.39 ವರ್ಷದ ಅದಿ ದ್ರಾವಿಡ ಜನಾಂಗ, ವಾಸ 02ನೇ ಹಂತ ರಾಜೀವ್ ಗಾಂಧಿ ಆಶ್ರಯ ಬಡಾವಣೆ, ಚಿತ್ರದುರ್ಗ ನಗರ ಈತನು ಕಲಂ.2(ಜಿ) ಆಪ್ ಕರ್ನಾಟಕ ಆಕ್ಟ್, ನಂ.12 ಆಪ್ 1985 ರ ಅಡಿಯಲ್ಲಿ ನಮೂದು ಮಾಡಿರುವಂತೆ ಜಿಲ್ಲಾಧಿಕಾರಿಗಳ ಆದೇಶ ಉಲ್ಲಂಘನೆ, ಹಲ್ಲೆ, ಹೊಡೆದಾಟ ಮಾಡುವ ಗೂಂಡಾ ವ್ಯಕ್ತಿಯಾಗಿರುವ ವೃತ್ತಿ ಪರ ಅಪರಾಧಿಯಾಗಿದ್ದು, ಮಾನವ ಶರೀರ, ಆಸ್ತಿಗೆ ಸಂಬಂಧಿಸಿದಂತೆ ಅಪರಾಧಿಕ ಕೃತ್ಯಗಳನ್ನು ಮಾಡುವ ಭಾರತೀಯ ದಂಡ ಸಂಹಿತೆ ಅದ್ಯಾಯ 8, 16, 17 ಮತ್ತು 22 ರ ಅಡಿಯಲ್ಲಿ ಅಪರಾಧವೆಸಗುವ

ಪ್ರವೃತ್ತಿವುಳ್ಳನಾಗಿರುತ್ತಾನೆ. ಈತನನ್ನು ಸಮಾಜ ವಿದ್ರೋಹಿ ಮತ್ತು ಸಾರ್ವಜನಿಕ ಸುವ್ಯವಸ್ಥೆಗೆ ಭಂಗ ತರುವ ಚಟುವಟಿಕೆಗಳಿಂದ ತಡೆಗಟ್ಟಬೇಕಾದರೆ ಈತನನ್ನು ಸದರಿ ಅಧಿನಿಯಮದಯಲ್ಲಿ ಬಂಧಿಸಿ ಸ್ಥಾನ ಬದ್ಧತೆಯಲ್ಲಿಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಚಿತ್ರದುರ್ಗ ಕೋಟೆ ಪೊಲೀಸ್ ಠಾಣೆಯು ಚಿತ್ರದುರ್ಗ ನಗರದಲ್ಲಿದ್ದು, ಕೋಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಿಶೇಷವಾಗಿ ಹೆಚ್ಚಾಗಿ ಹೆಚ್ಚಿನ ವಿದ್ಯಾಭ್ಯಾಸ ಹೊಂದಿಲ್ಲದವರು ವಾಸವಾಗಿರುತ್ತಾರೆ ಹಾಗೂ ಸದರಿಯವರು ಕೂಲಿ ಕಾರ್ಮಿಕರು, ಆಟೋ ರಿಕ್ಷಾ ಚಾಲಕರು, ಗಾರೆ ಕೆಲಸಗಾರರು, ಚಿಂದಿ ಆಯುವವರು, ಮೆಕಾನಿಕ್‌ಗಳು, ಕಟ್ಟಡ ಕಾರ್ಮಿಕರು, ಹಮಾಲಿ ಕೆಲಸಗಾರರು, ಮಂಡಕ್ಕಿ ಭಟ್ಟಿ ಕಾರ್ಮಿಕರು ಹಾಗೂ ಜೀವನ ನಿರ್ವಹಣೆಗೆ ಇತರೆ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಂಡು ವಾಸವಾಗಿರುವ ಜನರು ವಾಸವಾಗಿದ್ದು, ಅಲ್ಲಿ ವಿವಿಧ ಕೋಮುಗಳಾದ ಹಿಂದು, ಮುಸ್ಲಿಂ ಹಾಗೂ ಹಿಂದುಳಿದ ಜನಾಂಗದವರು ಹೆಚ್ಚಾಗಿ ವಾಸವಾಗಿದ್ದು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ವಿವಿಧ ಕೋಮುಗಳಿಗೆ ಸಂಬಂಧಿಸಿದಂತೆ ಯಾವುದಾದರೂ ಘಟನೆ/ವಿದ್ಯಮಾನಗಳು ಸಂಭವಿಸಿದಲ್ಲಿ ಸದರಿ ಘಟನೆಗಳು ಪರಿಣಾಮಗಳುಳ್ಳ ನಕಾರಾತ್ಮಕ ಚಟುವಟಿಕೆಗಳು ಜರುಗಬಹುದಾದ ಅತೀ ಸೂಕ್ಷ್ಮ ಸ್ಥಳಗಳಾದ ಚೇಳುಗುಡ್ಡ, ಅಗಸನಕಲ್ಲು, ಟಿಪ್ಪು ಸರ್ಕಲ್, ರೈಲ್ವೇ ಸ್ಟೇಷನ್ ಬಡಾವಣೆ, ನೆಹರು ನಗರ, ರಾಜೀವ್ ಗಾಂಧಿ ಆಶ್ರಯ ಬಡಾವಣೆ, ಸಿಹಿ ನೀರು ಹೊಂಡ, ಬುರುಜನ ಹಟ್ಟಿ ಪ್ರದೇಶಗಳು ಹಾಗೂ ಸದರಿ ಪ್ರದೇಶಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಸಂಬಂಧ ಅತೀ ಸೂಕ್ಷ್ಮ ಪ್ರದೇಶಗಳಾದ ಮಸೀದಿಗಳು, ಚರ್ಚ್‌ಗಳು ದೇವಸ್ಥಾನಗಳು ಮುಸ್ಲಿಂರ ಝುಂಡ/ಧ್ವಜ ಕಟ್ಟೆಗಳು ಇರುತ್ತವೆ. ಎದುರದಾರನು ಸದರಿ ಏರಿಯಾದಲ್ಲಿ ಹಾಲಿ ವಾಸವಾಗಿರುತ್ತಾನೆ. ಎದುರುದಾರನು ದಿ:25-06-1981 ರಂದು ಜನಿಸಿದ್ದು, ಚಿತ್ರದುರ್ಗ ನಗರದ ಕೋಟೆ ಪೊಲೀಸ್ ಠಾಣೆ ವ್ಯಾಪ್ತಿಯ ರಾಜೀವ್ ಗಾಂಧಿ ಆಶ್ರಯ ಬಡಾವಣೆ, ಚಿತ್ರದುರ್ಗ ನಗರದಲ್ಲಿ ತನ್ನ ಹೆಂಡತಿ ಶ್ರೀಮತಿ ಕವಿತಾ, ತಾಯಿ ಮಾರಕ್ಕ ಹಾಗೂ ಮಕ್ಕಳಾದ 1) ಕು॥ ಅಂಜಲಿ, ಸು 17 ವರ್ಷ, 2) ಕು॥ ಅನೂಪ್ ರಾಜ್, ಸು.15 ವರ್ಷ, 3) ಕು॥ ಅಮೃತ, ಸು.13 ವರ್ಷ ಇವರೊಂದಿಗೆ ಚಿತ್ರದುರ್ಗ ಕೋಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇರುವ 02ನೇ ಹಂತ ರಾಜೀವ್ ಗಾಂಧಿ ಆಶ್ರಯ ಬಡಾವಣೆಯಲ್ಲಿ ಶ್ರೀಮತಿ ಪಾರ್ವತಮ್ಮ ಕೋಂ ಓಬಣ್ಣ, ಶ್ರೀಮತಿ ಸರಸ್ವತಮ್ಮ ತಂದೆ ಓಬಳೇಶ್ ರವರ ಹೆಸರಿಗೆ ಹಂಚಿಕೆಯಾಗಿರುವ ಆರ್.ಸಿ.ಸಿ. ಹಂಚಿಕೆ ಮನೆಯಲ್ಲಿ ವಾಸವಾಗಿರುತ್ತಾನೆ. ದಿ:24-06-1987 ರಿಂದ ದಿ:09-04-1994ರ ಅವಧಿಯಲ್ಲಿ 01ರಿಂದ 07ನೇ ತರಗತಿಯವರೆಗೆ ಶ್ರೀ ಓಂಕಾರ ಉಚ್ಚನಾಗಲಿಂಗಸ್ವಾಮಿ ಕನ್ನಡ ಹಿರಿಯ ಪ್ರಾಥಮಿಕ ಪಾಠ ಶಾಲೆ, ಚೇಳುಗುಡ್ಡ, ಚಿತ್ರದುರ್ಗ ನಗರದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡಿದ್ದು, ಕನ್ನಡದಲ್ಲಿ ಓದಲು, ಬರೆಯಲು ಕಲಿತಿರುತ್ತಾನೆ, ಮುಂದಿನ ವಿದ್ಯಾಭ್ಯಾಸದ ಬಗ್ಗೆ ಯಾವುದೇ ದಾಖಲಾತಿಗಳು ಲಭ್ಯವಿಲ್ಲದೇ ಇರುವ ಬಗ್ಗೆ ನಮೂದಿಸಿರುತ್ತಾರೆ.

ಎದುರುದಾರನ ಪತ್ನಿ ಶ್ರೀಮತಿ ಕವಿತಾ ಕೋಂ ಶ್ರೀನಿವಾಸ್ ರವರು ಚಿತ್ರದುರ್ಗ ಕೋಟೆ ಠಾಣಾ ವ್ಯಾಪ್ತಿಯಲ್ಲಿರುವ ಚಿತ್ರದುರ್ಗ ನಗರ ಸಭೆ 10ನೇ ವಾರ್ಡ್ ಚೇಳುಗುಡ್ಡದ ಹಾಲಿ ನಗರ ಸಭೆಯ ಸದಸ್ಯರಾಗಿರುತ್ತಾರೆ. ಸದರಿ ವಾರ್ಡ್‌ನಲ್ಲಿ ಮುಸ್ಲಿಂ ಭಾಂದವರು ಹಾಗೂ ಹಿಂದುಳಿದ ವರ್ಗದವರು ಹೆಚ್ಚಾಗಿ ವಾಸವಾಗಿರುತ್ತಾರೆ. ನಗರ ಸಭಾ ಸದಸ್ಯೆ ಕವಿತಾ ರವರ ಪತಿ ಶ್ರೀನಿವಾಸ್ ರವರು ಒಂದು ಕೋಮಿನವರನ್ನು

ರಾಜಕೀಯವಾಗಿ ಬಳಸಿಕೊಳ್ಳುತ್ತಾ ಕಾನೂನುಗಳನ್ನು ಉಲ್ಲಂಘನೆ ಮಾಡುವುದು ರಾಜ್ಯ ಮತ್ತು ಕೇಂದ್ರ ಸರ್ಕಾರದ ಆದೇಶಗಳನ್ನು ಮತ್ತು ನೀತಿ ನಿಯಮಗಳನ್ನು ಉಲ್ಲಂಘಿಸುವಂತೆ ಸ್ಥಳೀಯ ನಿವಾಸಿಗಳನ್ನು ಪ್ರಚೋದಿಸುತ್ತಾ ಠಾಣಾ ವ್ಯಾಪ್ತಿಯಲ್ಲಿ ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆಯನ್ನು ಉಂಟುಮಾಡುವ ಚಟುವಟಿಕೆಗಳಲ್ಲಿ ಸಕ್ರಿಯನಾಗಿರುತ್ತಾನೆ. ಸದರಿ ಸಕ್ರಿಯ ಚಟುವಟಿಕೆಗಳಿಗೆ ಒಂದು ಕೋಮಿನ ಜನರನ್ನು ಹೆಚ್ಚಾಗಿ ಬಳಸಿಕೊಳ್ಳುತ್ತಿರುತ್ತಾನೆ.

ಎದುರುದಾರನು ತಾನೇ ಸ್ವಂತ ತಾನು ದಲಿತ ಮುಖಂಡ, ಪ್ರಭಲ ರಾಜಕೀಯ ಪಕ್ಷದ ಮುಖಂಡ, ಹಿಂದುಳಿದ ವರ್ಗಗಳ ಪರವಾಗಿ ಧ್ವನಿ ಎತ್ತುವವನು ಎಂದು ಹೇಳಿಕೊಂಡು ಹಿಂದುಳಿದ ಪ್ರದೇಶಗಳಾದ ಠಾಣಾ ವ್ಯಾಪ್ತಿಯ ರಾಜೀವ್ ಗಾಂಧಿ ಆಶ್ರಯ ಬಡಾವಣೆ ನಿವಾಸಿಗಳು, ಚೇಳುಗುಡ್ಡ, ಅಗಸನಕಲ್ಲು, ರೈಲ್ವೇ ಸ್ಟೇಷನ್ ಬಡಾವಣೆ, ತಿಪ್ಪಾರೆಡ್ಡಿ ನಗರದ ನಿವಾಸಿಗಳನ್ನು ಮತ್ತು ಯುವಕರನ್ನು ಅಕ್ರಮವಾಗಿ ಗುಂಪು ಸೇರಿಸಿಕೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಪ್ರತಿಭಟಿಸುವುದು ಸರ್ಕಾರಗಳಿಂದ ಪ್ರತಿಭಟನೆಗಳ ನಿಷೇಧಗಳ ಆದೇಶಗಳು ಇದ್ದರು ಸಹ ಆದೇಶಗಳನ್ನು ಉಲ್ಲಂಘನೆ ಮಾಡಿ ಸರ್ಕಾರಿ ನೌಕರರ ಕರ್ತವ್ಯಕ್ಕೆ ಅಡ್ಡಿಯನ್ನುಂಟು ಮಾಡಿ ಪ್ರತಿಭಟನೆಯನ್ನು ಮಾಡುತ್ತಾ ಸಾರ್ವಜನಿಕ ಆಸ್ತಿಪಾಸ್ತಿಗೆ ಧಕ್ಕೆಯನ್ನುಂಟು ಮಾಡುವುದು ಹಾಗೂ ಸಾರ್ವಜನಿಕ ಶಾಂತಿಗೆ ಭಂಗವನ್ನುಂಟು ಮಾಡುವ ಪ್ರವೃತ್ತಿಯಳ್ಳವುನಾಗಿರುತ್ತಾನೆ ಮತ್ತು ಸಾರ್ವಜನಿಕ ವಲಯದಲ್ಲಿ ಬಗೆಹರಿಯುವಂತಹ ಸಣ್ಣ ಪುಟ್ಟ ಘಟನೆಗಳನ್ನು ಸಹ ಜೀವಂತವಾಗಿರಿಸುವಂತೆ ನೋಡಿಕೊಂಡು ಆ ಮೂಲಕ ತಾನು ರಾಜಕೀಯ ಮುಂದಾಳು, ಹಿಂದುಳಿದ ವರ್ಗಗಳ ಪರ, ಪ್ರತಿಭಟನೆಗಳ ಪರ ಎಂತ ಪ್ರದರ್ಶಿಸಿಕೊಂಡು ತನ್ನ ಕಾರ್ಯವನ್ನು ಸಾಧಿಸಿಕೊಳ್ಳುವ ಪ್ರವೃತ್ತಿಯುಳ್ಳವನಾಗಿರುತ್ತಾನೆ.

ಎದುರುದಾರನು ತಾನು ಮುಸ್ಲಿಂಪರ ಹಿಂದುಳಿದ ವರ್ಗಗಳ ಪರವಾಗಿ ಇರುತ್ತೇನೆ ಅಂತ ವಿವಿಧ ಕೋಮುಗಳ ನಡುವೆ ವೈಶಮ್ಯವನ್ನುಂಟು ಮಾಡುವ ಮತ್ತು ಸಾರ್ವಜನಿಕ ಸುವ್ಯಸ್ಥೆಗೆ ಧಕ್ಕೆಯನ್ನುಂಟುಮಾಡುವ ಸಂದೇಶಗಳನ್ನು, ವೀಡಿಯೋಗಳನ್ನು ಸಾಮಾಜಿಕ ಜಾಲತಾಣಗಳಾದ, ಫೇಸ್‌ಬುಕ್, ವಾಟ್ಸ್ ಆಪ್ ಮುಂತಾದುವುಗಳಲ್ಲಿ ಪ್ರಚಾರಪಡಿಸಿ ಆ ಮೂಲಕ ಸಮಾಜದಲ್ಲಿ ಅಶಾಂತಿಯನ್ನು ಉಂಟುಮಾಡುವುದು ಹಾಗೂ ಈ ಬಗ್ಗೆ ಮುಸ್ಲಿಂ ಸಂಘಟನೆಗಳಾದ ಪಿ.ಎಫ್.ಐ ಮತ್ತು ಎಸ್.ಡಿ.ಪಿ.ಐ ಮುಂತಾದ ಸಂಘಟನೆಗಳಲ್ಲಿ ಸಕ್ರಿಯನಾಗಿದ್ದು ವಿವಿಧ ಪ್ರತಿಭಟನೆಗಳಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸುತ್ತಿರುತ್ತಾನೆ. ಹಾಗೂ ದಲಿತ ಸಂಘರ್ಷ ಸಮಿತಿ (ಎಂ.ಎಸ್.ಬಣ) ಸಂಘಟನೆಯ ರಾಜ್ಯ ಕಾರ್ಯದರ್ಶಿಯಾಗಿದ್ದು ದಿ:22-09-2016 ರಂದು ಒಂದು ಕೋಮಿನವರನ್ನು ಒಲಿಸುವ ಉದ್ದೇಶದಿಂದ ಹಾಗೂ ತಾನು ರಾಜಕೀಯವಾಗಿ ಹಾಗು ಸಾಮಾಜಿಕವಾಗಿ ತನ್ನ ಕಾರ್ಯಸಾಧನೆ ಮಾಡಿಕೊಳ್ಳುವ ಉದ್ದೇಶದಿಂದ ಸ್ಥಳೀಯ ಜಿಲ್ಲಾಢಳಿತದ ಆದೇಶಗಳನ್ನು ಉಲ್ಲಂಘನೆ ಮಾಡಿ ಚಿತ್ರದುರ್ಗ ಜಿಲ್ಲಾ ಕೇಂದ್ರವಾದ ನಗರ ಪೋಲೀಸ್ ಠಾಣಾ ವ್ಯಾಪ್ತಿಯ ಹಳೆ ಮಾಧ್ಯಮಿಕ ಶಾಲಾ ಆವರಣದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಎಂ.ಎಸ್.ಬಣ)ದ ವತಿಯಿಂತ **"ದಲಿತ ಮಹಾ ಗಣಪತಿ"** ಹೆಸರಿನಲ್ಲಿ ಗಣೇಶ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಿದ್ದು ಹಾಗು ಈ ಸಂಬಂಧ ಚಿತ್ರದುರ್ಗ ಜಿಲ್ಲಾ ಕೇಂದ್ರದಲ್ಲಿ ಸಮಾನತೆ ಯಾತ್ರೆಯನ್ನು ಕೈಗೊಂಡು ಚಿತ್ರದುರ್ಗ ಜಿಲ್ಲಾ ಕೇಂದ್ರದಲ್ಲಿ ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆಯನ್ನುಂಟುಮಾಡಿ ಸಾರ್ವಜನಿಕರಲ್ಲಿ ಭಯದ ವಾತಾವರಣವನ್ನು ಸೃಷ್ಟಿಸುವ ಮೂಲಕ ಸಾರ್ವಜನಿಕರ ನೆಮ್ಮದಿಗೆ ಧಕ್ಕೆಯನ್ನುಂಟುಮಾಡಿರುತ್ತಾನೆ.

ಮುಂದುವರೆದು ಅರ್ಜಿದಾರರು ತಮ್ಮ ಮನವಿಯಲ್ಲಿ ಎದುರುದಾರನು ಕರ್ನಾಟಕ ಪೊಲೀಸ್ ಕಾಯ್ದೆ ಹಾಗೂ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ ಬರುವ ಕೆಲವು ಅಪರಾಧಗಳನ್ನು ಸ್ವಭಾವತಃ ಮಾಡುತ್ತಾ ಬಂದಿರುತ್ತಾನೆ. ಸದರಿ ಪ್ರತಿ ವಾದಿಯ ವಿರುದ್ಧ ಕಳೆದ **05 ವರ್ಷಗಳಲ್ಲಿ ಚಿತ್ರದುರ್ಗ, ಚಿತ್ರದುರ್ಗ ಜಿಲ್ಲೆಯಲ್ಲಿರುವ ಪೊಲೀಸ್ ಠಾಣೆಗಳಾದ ಚಿತ್ರದುರ್ಗ ಕೋಟೆ ಪೊಲೀಸ್ ಠಾಣೆ, ಚಿತ್ರದುರ್ಗ ನಗರ ಪೊಲೀಸ್ ಠಾಣೆ ಮತ್ತು ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ಒಟ್ಟು 10 ಪ್ರಕರಣಗಳು ದಾಖಲಾಗಿರುತ್ತವೆ ಹಾಗೂ ಸದರಿ 03 ಠಾಣೆಗಳಲ್ಲಿಯೂ ಪ್ರತಿವಾದಿಯ ವಿರುದ್ಧ ಹಾಲಿ ರೌಡಿ ಹಾಳೆಯನ್ನು ತೆರೆಯಲಾಗಿರುತ್ತದೆ.** ಎದುರುದಾರನು ಜಿಲ್ಲಾಧಿಕಾರಿಗಳ ಆದೇಶಗಳನ್ನು ಧಿಕ್ಕರಿಸಿ ಈ ನೆಲದ ಸಾಮಾನ್ಯ ಕಾನೂನುಗಳಿಗೆ ಗೌರವ ನೀಡದೆ ಪದೇ ಪದೇ ಇಂತಹದೇ ಕೃತ್ಯಗಳಲ್ಲಿ ಭಾಗಿಯಾಗಿ ತನ್ನ ಪ್ರವೃತ್ತಿಯನ್ನು ಮುಂದುವರೆಸಿ ಸಾರ್ವಜನಿಕರಲ್ಲಿ ಭೀತಿಯನ್ನು ಹುಟ್ಟಿಸಿ ಸಾರ್ವಜನಿಕ ವ್ಯವಸ್ಥೆಗೆ ದಕ್ಕೆ ಉಂಟುಮಾಡುತ್ತಿರುತ್ತಾನೆ ಎಂದು ಆಪಾದಿಸಿರುತ್ತಾರೆ.

ಅರ್ಜಿದಾರರು ತಮ್ಮ ಅರ್ಜಿ ಸಂಗಡ ಎದುರುದಾರನ ವಿರುದ್ಧ ದಾಖಲಾದ ಅಪರಾಧಿಕ ಪ್ರಕರಣಗಳ ಒಟ್ಟು ಅನುಬಂಧ–02 ರಿಂದ 11 ರಲ್ಲಿ **ಪುಟ ಸಂಖ್ಯೆ 131 ರಿಂದ 435** ವರಿಗಿನ ದಾಖಲಾತಿಗಳನ್ನು ಹಾಜರ್ಪಡಿಸಿರುತ್ತಾರೆ. ಸದರಿ ದಾಖಲಾತಿಗಳು ಈ ಕೆಳಗಿನ ವಿವರಗಳನ್ನು ಹೊಂದಿರುತ್ತವೆ.

**1) ಚಿತ್ರದುರ್ಗ ನಗರ ಪೊಲೀಸ್ ಠಾಣೆ ಗುನ್ನೆ ನಂ:519/2016 ಕಲಂ 188 ಐಪಿಸಿ**

ಆರೋಪಿ ಶ್ರೀನಿವಾಸ್ ತಂದೆ ಹನುಂತಪ್ಪನು ಚಿತ್ರದುರ್ಗ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಹಳೆ ಮಾಧ್ಯಮಿಕ ಶಾಲಾ ಆವರಣದಲ್ಲಿ ದಲಿತ ಸಂಘರ್ಷ ಸಮಿತಿ (ಎಂ.ಎಸ್.ಬಣ)ದ ವತಿಯಿಂದ ದಲಿತ ಮಹಾ ಗಣಪತಿ ಹೆಸರಿನಲ್ಲಿ ಗಣೇಶ ವಿಗ್ರಹದ ಪ್ರತಿಷ್ಠಾಪನೆ ಮಾಡಿದ್ದು ದಿ:22-09-2016 ರಂದು ದಲಿತ ಮಹಾ ಗಣಪತಿಯ ವಿಸರ್ಜನೆ ಮತ್ತು ನಗರದಲ್ಲಿ ಸಮಾನತೆಯ ಯಾತ್ರೆಯನ್ನು ಕೈಗೊಂಡಿದ್ದು ಸದರಿ ಮಹಾ ಗಣಪತಿ ವಿಸರ್ಜನೆ ಮೆರವಣಿಗೆ ಮತ್ತು ಸಮಾನತೆಯ ಯಾತ್ರೆಯಲ್ಲಿ ಹೆಚ್ಚು ಶಬ್ದಗಳನ್ನು ಹೊರಡಿಸುವಂತಹ ಡಿ.ಜೆ. ಸೌಂಡ್ ಸಿಸ್ಟಂಗಳನ್ನು ಬಳಸಬಾರದಂತ ಜಿಲ್ಲಾಢಳಿತ ಆದೇಶ ಹೊರಡಿಸಿದ್ದರೂ ಸಹ ಆರೋಪಿತನು 01 ಟ್ರ್ಯಾಕ್ಟರ್ ಮತ್ತು 01 ಲಾರಿಯಲ್ಲಿ ಹೆಚ್ಚ ಶಬ್ಧಗಳನ್ನು ಹೊರಡಿಸುವಂತಹ ಸಿಸ್ಟಂಗಳನ್ನು ಅಳವಡಿಸಿಕೊಂಡು ಸದರಿಯವುಗಳನ್ನು ಬಳಸಿ ಜಿಲ್ಲಾಧಿಕಾರಿಗಳ ಆದೇಶವನ್ನು ಉಲ್ಲಂಘನೆ ಮಾಡಿದ್ದು ಈ ಬಗ್ಗೆ ದಿ:22-09-2016 ರಂದು ಚಿತ್ರದುರ್ಗ ನಗರ ಪೊಲೀಸ್ ಠಾಣೆ ಗುನ್ನೆ ನಂ:519/2016 ಕಲಂ 188 ಐಪಿಸಿ. ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.

ಸದರಿ ಪ್ರಕರಣದಲ್ಲಿ ದಿ:14-06-2017 ರಂದು ಆರೋಪಿ ಶ್ರೀನಿವಾಸನ ವಿರುದ್ಧ ಘನ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿಕೊಂಡಿದ್ದು, ಸದರಿ ಪ್ರಕರಣವು ಚಿತ್ರದುರ್ಗದ ಘನ 02ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಸಿಸಿ ನಂಬರ್ 930/17 ರಲ್ಲಿ ವಿಚಾರಣೆ ನಡೆದು ದಿ:31-10-2019 ರಂದು ಆರೋಪಿತನಿಗೆ ಶಿಕ್ಷೆ ಆಗಿರುತ್ತದೆ. ಪರಿಶೀಲನೆ ಸಲುವಾಗಿ ಸದರಿ ದಾಖಲಾತಿಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ. ಪುಟ ಸಂಖ್ಯೆ 131 ರಿಂದ 152 ರವರೆಗೆ ಲಗತ್ತಿಸಿರುತ್ತದೆ.

**2) ಚಿತ್ರದುರ್ಗ ನಗರ ಪೊಲೀಸ್ ಠಾಣೆ ಗುನ್ನೆ ನಂ:520/16 ಕಲಂ 3 ಕರ್ನಾಟಕ ಓಪನ್ ಪ್ಲೇಸ್ ಡಿಸ್‌ಫಿಗರ್‌ಮೆಂಟ್ ಆಕ್ಟ್–1951, 1981 ಕಲಂ 115, 133 ಮುನ್ಸಿಪಾಲಿಟಿ ಆಕ್ಟ್–1964.**

ಆರೋಪಿ ಶ್ರೀನಿವಾಸ್ ತಂದೆ ಹನುಮಂತಪ್ಪನು ಚಿತ್ರದುರ್ಗ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಹಳೆ ಮಾಧ್ಯಮಿಕ ಶಾಲಾ ಆವರಣದಲ್ಲಿ ದಲಿತ ಸಂಘರ್ಷ ಸಮಿತಿ (ಎಂ.ಎಸ್.ಬಣ)ದ ವತಿಯಿಂದ ದಲಿತ ಮಹಾ ಗಣಪತಿ ಹೆಸರಿನಲ್ಲಿ ಗಣೇಶ ವಿಗ್ರಹದ ಪ್ರತಿಷ್ಠಾಪನೆ ಮಾಡಿದ್ದು ದಿ:22-09-2016 ರಂದು ದಲಿತ ಮಹಾ ಗಣಪತಿಯ ವಿಸರ್ಜನೆ ಮತ್ತು ನಗರದಲ್ಲಿ ಸಮಾನತೆಯ ಯಾತ್ರೆಯನ್ನು ಕೈಗೊಂಡಿದ್ದು ಸದರಿ ಮಹಾ ಗಣಪತಿ ವಿಸರ್ಜನೆ ಮೆರವಣಿಗೆ ಮತ್ತು ಸಮಾನತೆಯ ಯಾತ್ರೆಯ ಕಾರ್ಯಕ್ರಮಕ್ಕೆ ಆರೋಪಿತನು ಮೇಲ್ಕಂಡ ಸಮಿತಿಯ ವತಿಯಿಂದ ಚಿತ್ರದುರ್ಗ ನಗರದ ನಿಷೇದಿತ ಪ್ರದೇಶಗಳಾದ ಬಿ.ಡಿ. ರಸ್ತೆ, ಕನಕ ಸರ್ಕಲ್‌ನಿಂದ ಚಳ್ಳಕೆರೆ ಸರ್ಕಲ್ ಗೇಟ್‌ವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ನೀಲಿ ಬಣ್ಣದ ಬಟ್ಟೆ ಮತ್ತು ಫ್ಲೆಕ್ಸ್‌ಗಳನ್ನು ಹಾಕಿಸಿ ಸಾರ್ವಜನಿಕ ಸ್ಥಳವನ್ನು ವಿರೂಪಗೊಳಿಸಿರುವುದು ಹಾಗೂ ಸಾರ್ವಜನಿಕ ಓಡಾಡಕ್ಕೆ ತೊಂದರೆಯನ್ನುಂಟುಮಾಡುವುದು ಈ ಮೂಲಕ ಸಮಾಜದಲ್ಲಿ ಕೋಮು ದ್ವೇಷವನ್ನು ಉಂಟುಮಾಡಿದ್ದು ಆರೋಪಿತರಾದ ಶ್ರೀನಿವಾಸ್, ಮಹಾಲಿಂಗಪ್ಪ, ಹನುಮಂತಪ್ಪ ರವರ ವಿರುದ್ದ ಈ ಬಗ್ಗೆ ದಿ:23-09-2016 ರಂದು ಚಿತ್ರದುರ್ಗ ನಗರ ಪೊಲೀಸ್ ಠಾಣೆ ಗುನ್ನೆ ನಂ:520/16 ಕಲಂ 3 ಕರ್ನಾಟಕ ಓಪನ್ ಪ್ಲೇಸ್ ಡಿಸ್‌ಫಿಗರ್‌ಮೆಂಟ್ ಆಕ್ಟ್–1951, 1981 ಕಲಂ 115, 133 ಮುನ್ಸಿಪಾಲಿಟಿ ಆಕ್ಟ್–1964. ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.

ಸದರಿ ಪ್ರಕರಣದಲ್ಲಿ ದಿ:08-02-2017 ರಂದು ಆರೋಪಿ ಶ್ರೀನಿವಾಸನ ವಿರುದ್ಧ ಘನ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿಕೊಂಡಿದ್ದು, ಸದರಿ ಪ್ರಕರಣವು ಚಿತ್ರದುರ್ಗದ ಘನ 02ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಸಿಸಿ ನಂಬರ್ 414/17 ರಲ್ಲಿ ವಿಚಾರಣೆ ನಡೆದು ದಿ:04-06-2019 ರಂದು ಆರೋಪಿಗೆ ಶಿಕ್ಷೆಯಾಗಿರುತ್ತದೆ. ಸಂಬಂಧಿಸಿದ ದಾಖಲಾತಿಗಳನ್ನು ಅನುಬಂಧ–3 ರಲ್ಲಿ ಲಗತ್ತಿಸಿದ್ದು, ಪುಟ ಸಂಖ್ಯೆ 153 ರಿಂದ 173 ರವರೆಗೆ ಇರುತ್ತವೆ.

**3) ಚಿತ್ರದುರ್ಗ ನಗರ ಪೊಲೀಸ್ ಠಾಣೆ ಗುನ್ನೆ ನಂ: 605/16 ಕಲಂ 143, 147, 353, 153 ರೆ/ವಿ 149 ಐಪಿಸಿ**

ದಿ:28-10-2016 ರಂದು ಸಂಜೆ 7-30 ಗಂಟೆಯಲ್ಲಿ ಟಿಪ್ಪು ಜಯಂತಿ ಆಚರಣೆಯ ಪರ ಮತ್ತು ವಿರೋಧವಾಗಿ ಕರ ಪತ್ರಗಳನ್ನು ಹಂಚುವ ವಿಚಾರವಾಗಿ ಯಾರೋ ಹುಡುಗರು ಚಿತ್ರದುರ್ಗ ನಗರದ ಗಾಂಧೀ ಸರ್ಕಲ್‌ನಲ್ಲಿ ಗಲಾಟೆ ಮಾಡಿಕೊಂಡಿದ್ದು ಇದೇ ವಿಚಾರವಾಗಿ ಪರ ಮತ್ತು ವಿರೋಧ ವ್ಯಕ್ತಪಡಿಸುವ ಎರಡೂ ಗುಂಪುಗಳು ಸೇರಿಕೊಂಡು ಚಿತ್ರದುರ್ಗ ನಗರದಲ್ಲಿ ಇರುವ ಚಿತ್ರದುರ್ಗ ನಗರ ಪೊಲೀಸ್ ಠಾಣೆಯ ಮುಂಭಾಗ ಜಮಾಯಿಸಿ ಆರೋಪಿ ಶ್ರೀನಿವಾಸನು ಸುಮಾರು 50-60 ಜನರನ್ನು ಅಕ್ರಮ ಗುಂಪು ಸೇರಿಸಿಕೊಂಡು ಘೋಷಣೆಗಳನ್ನು ಕೂಗುತ್ತಾ, ಪೊಲೀಸರು ನೀಡಿದ ಸೂಚನೆಗಳನ್ನು ಉಲ್ಲಂಘಿಸಿ ಪೊಲೀಸ್ ಠಾಣೆಯ ಅಧಿಕಾರಿ ಮತ್ತು ಸಿಬ್ಬಂಧಿಯವರ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ ಅಂತ ಇತ್ಯಾದಿ ಇದ್ದ ದೂರಿನ ಮೇರೆಗೆ ಪ್ರಕರಣ ದಾಖಲಾಗಿರುತ್ತದೆ.

ಸದರಿ ಪ್ರಕರಣದ ಆರೋಪಿ ಶ್ರೀನಿವಾಸನನ್ನು ದಿ:29-10-2016 ರಂದು ದಸ್ತಗಿರಿ ಮಾಡಿ ಘನ ನ್ಯಾಯಾಲಯಕ್ಕೆ ಹಾಜರ್ಪಡಿಸಿದ್ದು ನ್ಯಾಯಾಲಯವು ಆರೋಪಿತನಿಗೆ ನ್ಯಾಯಾಂಗ ಬಂಧನದ ಆದೇಶವನ್ನು

ನೀಡಿದ್ದು, ಸದರಿ ಆದೇಶದ ಮೇರೆಗೆ ದಿ:29-10-2016 ರಿಂದ ದಿ:03-11-2016ರವರೆಗೆ ಒಟ್ಟು 06 ದಿನಗಳ ಕಾಲ ಚಿತ್ರದುರ್ಗ ಜಿಲ್ಲಾ ಕಾರಾಗೃಹದಲ್ಲಿ ಇದ್ದು ದಿ:03-11-2016 ರಂದು ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾನೆ.

ಸದರಿ ಪ್ರಕರಣದಲ್ಲಿ ದಿ:24-05-2017 ರಂದು ಆರೋಪಿ ಶ್ರೀನಿವಾಸನ ವಿರುದ್ಧ ಘನ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿಕೊಂಡಿದ್ದು, ಸದರಿ ಪ್ರಕರಣವು ಚಿತ್ರದುರ್ಗದ ಘನ 02ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಸಿಸಿ ನಂಬರ್ 809/17 ರಲ್ಲಿ ವಿಚಾರಣೆ ನಡೆದಿದ್ದು, ದಿ:05-03-2020 ರಂದು ಘನ ಸರ್ಕಾರದ ಸಂಖ್ಯೆ ನಂ:ಇ-ಒಇ/45/2019 ರಲ್ಲಿ ಸರ್ಕಾರವು ವಿಚಾರಣೆಯಿಂದ ಹಿಂಪಡೆದುಕೊಂಡಿರುತ್ತದೆ. ಈ ಬಗ್ಗೆ ದಾಖಲಾತಿಗಳನ್ನು ಅನುಬಂಧ-4 ರಲ್ಲಿ ಲಗತ್ತಿಸಿದ್ದು, ಪುಟ ಸಂಖ್ಯೆ 174 ರಿಂದ 287ರ ವರೆಗೆ ಇರುತ್ತವೆ.

**4) ಚಿತ್ರದುರ್ಗ ಕೋಟೆ ಪೊಲೀಸ್ ಠಾಣೆ ಗುನ್ನೆ ನಂ: 22/2019 ಕಲಂ 323, 324, 506, 504 ಐಪಿಸಿ.**

ದಿ:04-02-2019 ರಂದು ರಾತ್ರಿ 9-30 ಗಂಟೆ ಸಮಯದಲ್ಲಿ ಪಿರ್ಯಾದಿ ಬಸವರಾಜ್ @ ಗೆದ್ದಲಿ ರಾಜ ಇವರು ಚಿತ್ರದುರ್ಗ ನಗರದ ಚೇಳುಗುಡ್ಡ ಏರಿಯಾದ ತಮ್ಮ ಮನೆಯ ಹತ್ತಿರ ಇರುವಾಗ್ಗೆ ಆರೋಪಿ ಶ್ರೀನಿವಾಸನು ನಿಮ್ಮ ಮನೆಯ ಗೋಡೆ ಚರಂಡಿ ಮೇಲೆ ಇರುವ ಗೋಡೆಯನ್ನು ತೆಗೆಯಬೇಕು ಎಂದು ಕೇಳಿದಾಗ ಇಷ್ಟೊತ್ತಿನಲ್ಲಿ ಗೋಡೆಯನ್ನು ತೆಗೆಯಲು ಆಗುವುದಿಲ್ಲ ಎಂದು ಹೇಳಿದ್ದಕ್ಕೆ ಶ್ರೀನಿವಾಸನು ತನ್ನ ರೌಡಿತನವನ್ನು ಪ್ರದರ್ಶಿಸಿ ಈಗಲೇ ತೆಗೆಯಬೇಕೆಂದು ಅವಾಚ್ಯ ಶಬ್ದಗಳಿಂದ ಬೈದಾಡಿ ಪಿರ್ಯಾದಿ ಬಸವರಾಜನಿಗೆ ತನ್ನ ಕೈ ಕಾಲುಗಳಿಂದ ಹೊಡೆದು, ಅಲ್ಲೇ ಬಿದ್ದಿದ್ದ ಇಟ್ಟಿಗೆ ತುಂಡನ್ನು ತೆಗೆದುಕೊಂಡು ಪಿರ್ಯಾದಿಯ ತಲೆಗೆ ಹೊಡೆದಿರುತ್ತಾರೆ, ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲ ನಿನ್ನ ಪ್ರಾಣ ತೆಗೆಯುತ್ತೇನೆ ಅಂತ ಪ್ರಾಣ ಬೆದರಿಕೆ ಹಾಕಿರುತ್ತಾನೆ ಅಂತ ಇದ್ದ ಮೇರೆಗೆ ಪ್ರಕರಣ ದಾಖಲಾಗಿರುತ್ತದೆ.

ಸದರಿ ಪ್ರಕರಣದಲ್ಲಿ ದಿ:07-05-2019 ರಂದು ಆರೋಪಿ ಶ್ರೀನಿವಾಸನ ವಿರುದ್ಧ ಘನ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿಕೊಂಡಿದ್ದು, ಸದರಿ ಪ್ರಕರಣವು ಚಿತ್ರದುರ್ಗದ ಘನ 02ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಸಿಸಿ ನಂಬರ್ 508/19 ರಲ್ಲಿ ವಿಚಾರಣೆ ನಡೆದು ದಿ:04-03-2021 ರಂದು ಕಲಂ 248(1) ಸಿಆರ್‌ಪಿಸಿ ರೀತ್ಯಾ ಪ್ರಕರಣವು ಬಿಡುಗಡೆಯಾಗಿರುತ್ತದೆ. ಈ ಬಗ್ಗೆ ದಾಖಲಾತಿಗಳನ್ನು ಅನುಬಂಧ-5 ರಲ್ಲಿ ಲಗತ್ತಿಸಿದ್ದು, ಪುಟ ಸಂಖ್ಯೆ 288 ರಿಂದ 310 ರವರೆಗೆ ಇರುತ್ತವೆ.

**5) ಚಿತ್ರದುರ್ಗ ಕೋಟೆ ಪೊಲೀಸ್ ಠಾಣೆ ಗುನ್ನೆ ನಂ: 19/2020 ಕಲಂ 153, 505 (2) ಐಪಿಸಿ.**

ದಿ:21-02-2020 ರಂದು ಆರೋಪಿ ಶ್ರೀನಿವಾಸನು ತನ್ನ ಫೇಸ್‌ಬುಕ್‌ನಿಂದ ಲೈವ್ ವೀಡಿಯೋ ಮಾಡಿ ಮಧುಗಿರಿ ಮೋದಿ ಎಂಬುವವರು ಮಾಡಿದ್ದ ವೀಡಿಯೋಗೆ ವಿರುದ್ದವಾಗಿ ಮಾತನಾಡಿ ಹಿಂದು ಮತ್ತು ಮುಸ್ಲಿಂ ಧರ್ಮಗಳ ವಿಚಾರವನ್ನು ಮಾತನಾಡಿ ಮುಸ್ಲಿಂ ಧರ್ಮದ ಪರವಾಗಿ ಮಾತನಾಡಿರುತ್ತಾನೆ ಇದರಿಂದಾಗಿ ಜನರ ನಡುವೆ ಭೇದ ಹಾಗೂ ವೈಶಮ್ಯವನ್ನುಂಟು ಮಾಡುವುದಲ್ಲದೆ ಅದನ್ನು ನೋಡಿದ ಜನರು ಗಲಭೆಯನ್ನುಂಟುಮಾಡಲು ಪ್ರಚೋದನೆಯನ್ನು ಮಾಡಿರುತ್ತಾನೆ ಎಂದು ಇದ್ದ ಮೇರೆಗೆ ಪ್ರಕರಣ ದಾಖಲಾಗಿದ್ದು,

ಸದರಿ ಪ್ರಕರಣದ ಕಡತವನ್ನು ಕೃತ್ಯ ನಡೆದ ಸ್ಥಳದ ಆಧಾರದ ಮೇರೆಗೆ ಘನ ನ್ಯಾಯಾಲಯದ ಅನುಮತಿಯನ್ನು ಪಡೆದು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಪೊಲೀಸ್ ಠಾಣೆಗೆ ದಿ:29-04-2020 ರಂದು ವರ್ಗಾವಣೆ ನೀಡಿದ್ದು, ಎಫ್.ಎಸ್.ಎಲ್ ವರದಿ ಬರಲು ಬಾಕಿ ಇದ್ದು, ಸದರಿ ಪ್ರಕರಣವು ಹಾಲಿ ತನಿಖೆಯಲ್ಲಿ ಇರುತ್ತದೆ.

ಸದರಿ ಪ್ರಕರಣದಲ್ಲಿ ಎದುರುದಾರರನ್ನು ದಿ:17-03-2020 ರಂದು ದಸ್ತಗಿರಿ ಮಾಡಿ ಘನ ನ್ಯಾಯಾಲಯಕ್ಕೆ ಹಾಜರ್ಪಡಿಸಿದ್ದು ನ್ಯಾಯಾಲಯವು ಆರೋಪಿತನಿಗೆ ನ್ಯಾಯಾಂಗ ಬಂಧನದ ಆದೇಶವನ್ನು ನೀಡಿದ್ದು, ಸದರಿ ಆದೇಶದ ಮೇರೆಗೆ ದಿ:17-03-2020 ರಿಂದ ದಿ:18-03-2020ರವರೆಗೆ ಚಿತ್ರದುರ್ಗ ಜಿಲ್ಲಾ ಕಾರಾಗೃಹದಲ್ಲಿದ್ದು ದಿ:18-03-2020 ರಂದು ಘನ ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾನೆ. ಈ ಬಗ್ಗೆ ದಾಖಲಾತಿಗಳನ್ನು ಅನುಬಂಧ-6 ರಲ್ಲಿ ಲಗತ್ತಿಸಿದ್ದು, ಪುಟ ಸಂಖ್ಯೆ 311 ರಿಂದ 343 ರವರೆಗೆ ಇರುತ್ತವೆ.

**6) ಚಿತ್ರದುರ್ಗ ಕೋಟೆ ಪೊಲೀಸ್ ಠಾಣೆ ಗುನ್ನೆ ನಂ: 156/2020 ಕಲಂ 153(ಎ) 505 (2) ಐಪಿಸಿ ಮತ್ತು ಕಲಂ 3 ಕರ್ನಾಟಕ ಓಪನ್ ಪ್ಲೇಸ್ ಡಿಸ್‌ಫಿಗರ್‌ಮೆಂಟ್ ಆಕ್ಟ್-1951, 1981.**

ದಿ:30-09-2020 ರಂದು ಬೆಳಗಿನ ಜಾವ 04-30 ಗಂಟೆಯಲ್ಲಿ ಆರೋಪಿ ಶ್ರೀನಿವಾಸನು ಚಿತ್ರದುರ್ಗ ನಗರದ ಚೇಳುಗುಡ್ಡದ ಈಶ್ವರನ ಕಲ್ಲು ದೇವಸ್ಥಾನದ ಮುಂಭಾಗ ಗೋಡೆಯ ಮೇಲೆ ಬರೆಯಿಸಿದ್ದ ಶ್ರೀ ವಿಶ್ವ ಹಿಂದೂ ಪರಿಷತ್ ಭಜರಂಗದಳ ಶಿವ ಕೇಸರಿ ಚೇಳುಗುಡ್ಡ ಚಿತ್ರದುರ್ಗ ಜಿಲ್ಲೆ ಎಂಬ ಬರಹದ ಬೋರ್ಡ್‌ಅನ್ನು ಕಪ್ಪುಬಣ್ಣದಿಂದ ಸ್ಪ್ರೇಮಾಡಿ ಅಳಸಿ ವಿರೂಪಗೊಳಿಸಿರುತ್ತಾನೆ. ಆರೋಪಿತನು ಹಿಂದೂ ಮತ್ತು ಮುಸ್ಲಿಂ ಕೋಮುಗಳ ನಡುವೆ ದೊಂಬಿ ಗಲಾಟೆ ಸೃಷ್ಠಿಸುವ ಉದ್ದೇಶದಿಂದ ಹಾಗೂ ವಿವಿಧ ವರ್ಗಗಳ ನಡುವೆ ದ್ವೇಷ ಅಥವಾ ವೈರತ್ವವನ್ನು ಉಂಟು ಮಾಡುವ ಉದ್ದೇಶದಿಂದ ದೇವಸ್ಥಾನದ ಮುಂಭಾಗದ ಗೋಡೆಯ ಮೇಲಿನ ಬೋರ್ಡ್‌ಅನ್ನು ವಿರೂಪಗೊಳಿಸಿರುತ್ತಾನೆ ಎಂದು ಇದ್ದ ಮೇರೆಗೆ ಸದರಿ ಪ್ರಕರಣವು ದಾಖಲಾಗಿದ್ದು, ಪ್ರಕರಣದಲ್ಲಿ ದಿ:05-08-2021 ರಂದು ಆರೋಪಿ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿದ್ದು, ಎಪಿಪಿ ರವರ ಪರಿಶೀಲನೆಗೆ ಸಲ್ಲಿಸಿಕೊಂಡಿದ್ದು, ಅವರಿಂದ ಪರಿಶೀಲನೆಯಾಗಿ ಬರಲು ಬಾಕಿ ಇರುತ್ತದೆ.

ಸದರಿ ಪ್ರಕರಣದಲ್ಲಿ ಆರೋಪಿ ಶ್ರೀನಿವಾಸ್ ರವರನ್ನು ದಿ:01-10-2020 ರಂದು ದಸ್ತಗಿರಿ ಮಾಡಿ ಘನ ನ್ಯಾಯಾಲಯಕ್ಕೆ ಹಾಜರ್ಪಡಿಸಿದ್ದು ನ್ಯಾಯಾಲಯವು ಆರೋಪಿತನಿಗೆ ನ್ಯಾಯಾಂಗ ಬಂಧನದ ಆದೇಶವನ್ನು ನೀಡಿದ್ದು, ಸದರಿ ಆದೇಶದ ಮೇರೆಗೆ ದಿ:01-10-2020 ರಿಂದ ದಿ:05-10-2020ರವರೆಗೆ ಒಟ್ಟು 05 ದಿನಗಳ ಕಾಲ ಚಿತ್ರದುರ್ಗ ಜಿಲ್ಲಾ ಕಾರಾಗೃಹದಲ್ಲಿದ್ದು ದಿ:05-10-2020 ರಂದು ಘನ ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾನೆ. ಈ ಬಗ್ಗೆ ದಾಖಲಾತಿಗಳನ್ನು ಅನುಬಂಧ-7 ರಲ್ಲಿ ಲಗತ್ತಿಸಿದ್ದು, ಪುಟ ಸಂಖ್ಯೆ 344 ರಿಂದ 380 ರವರೆಗೆ ಇರುತ್ತವೆ.

**7) ಚಿತ್ರದುರ್ಗ ಕೋಟೆ ಪೊಲೀಸ್ ಠಾಣೆ ಗುನ್ನೆ ನಂ: 166/2020 ಕಲಂ 182, 420 ಐಪಿಸಿ.**

ದಿ:14-05-2020 ರಂದು ರಾತ್ರಿ ಸುಮಾರು 8-30 ಗಂಟೆ ಸಮಯದಲ್ಲಿ ಚಿತ್ರದುರ್ಗ ನಗರದ ನಾಮಕಲ್ ಗ್ಯಾರೇಜ್ ಮುಂಭಾಗದ ಬೆಂಗಳೂರು ಕಡೆಯಿಂದ ದಾವಣಗೆರೆ ಕಡೆಗೆ ಹೋಗುವ ಎನ್‌ಹೆಚ್-48 ರಸ್ತೆಯಲ್ಲಿ ವಿರೂಪಾಕ್ಷ ತಂದೆ ಮಹದೇವಪ್ಪ ರವರು ಬೆಂಗಳೂರಿನಿಂದ ರಾಜಸ್ಥಾನಕ್ಕೆ ಬಾಡಿಗೆ ಹೋಗುವ ಸಲುವಾಗಿ ನಂಬರ್

ಕೆಎ–02 ಡಿ–9626ನೇ ಟೆಂಪೊ ಟ್ರ್ಯಾಕ್ಸ್ ವಾಹನದಲ್ಲಿ ಹೋಗುತ್ತಿರುವಾಗ್ಗೆ ಅದೇ ವೇಳೆಗೆ ಸದರಿ ಎನ್‌ಹೆಚ್–48 ರಸ್ತೆಯ ಮಧ್ಯದ ಡಿವೈಡರ್ ಯು ಟರ್ನ್‌ನಲ್ಲಿ ಬಂದ ನಂಬರ್ ಕೆಎ–16 ಇಇ–6999ನೇ ಸ್ಕೂಟಿಯ ಮೋಟಾರ್ ಸೈಕಲ್ ಸವಾರನು ಟೆಂಪೂ ಟ್ರ್ಯಾಕ್ಸ್ ವಾಹನಕ್ಕೆ ಅಡ್ಡಬಂದಿದ್ದರ ಪರಿಣಾಮ ಸದರಿ ವಾಹನದ ಚಾಲಕನು ಸ್ಕೂಟಿಗೆ ಢಿಕ್ಕಿಹೊಡೆಯುವುದನ್ನು ತಪ್ಪಿಸುವ ಸಲುವಾಗಿ ಏಕಾಏಕಿ ಬ್ರೇಕ್ ಹಾಕಿದ ಪರಿಣಾಮ ಸದರಿ ವಾಹನವು ಪಲ್ಟಿಯಾಗಿ ರಸ್ತೆ ಮೇಲೆ ಬಿದ್ದಿದ್ದು ಈ ಬಗ್ಗೆ ಚಿತ್ರದುರ್ಗ ಸಂಚಾರಿ ಪೊಲೀಸ್ ಠಾಣೆ ಗುನ್ನೆ ನಂ:128/2020 ಕಲಂ 279, 337 ಐಪಿಸಿ ಮತ್ತು ಕಲಂ 187 ಐ.ಎಂ.ವಿ ಆಕ್ಟ್ ರೀತ್ಯಾ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣದ ತನಿಖಾ ವೇಳೆಯಲ್ಲಿ ಅಪಘಾತವನ್ನು ಉಂಟುಮಾಡಿದ್ದ ಮೋಟಾರ್ ಸೈಕಲ್ ಮಾಲೀಕ ಆರೋಪಿ ಶ್ರೀನಿವಾಸನು ವಾಹನದ ಅಸಲು ನಂಬರ್ ಕೆಎ–16 ಇಇ–6303 ಅಂತ ತಿಳಿದಿದ್ದರೂ ಸಹ ವಂಚಿಸುವ ಉದ್ದೇಶದಿಂದ ಅಪ್ರಮಾಣಿಕವಾಗಿ ನಂಬರ್ ಕೆಎ–16 ಇಇ–6999 ತಪ್ಪು ನಂಬರ್ ಪ್ಲೇಟ್‌ಅನ್ನು ಹಾಕಿಕೊಂಡಿದ್ದು ಈ ಮೂಲಕ ಪೊಲೀಸರಿಗೆ ಸುಳ್ಳು ಮಾಹಿತಿಯನ್ನು ನೀಡಿರುತ್ತಾನೆ ಅಂತ ದೂರು ದಾಖಲಾಗಿರುತ್ತದೆ. ಪ್ರಕರಣದಲ್ಲಿ ದಿ:05–08–2021 ರಂದು ಆರೋಪಿ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿದ್ದು, ಎಪಿಪಿ ರವರ ಪರಿಶೀಲನೆಗೆ ಸಲ್ಲಿಸಿಕೊಂಡಿದ್ದು, ಅವರಿಂದ ಪರಿಶೀಲನೆಯಾಗಿ ಬರಲು ಬಾಕಿ ಇರುತ್ತದೆ. ಈ ಬಗ್ಗೆ ದಾಖಲಾತಿಗಳನ್ನು ಅನುಬಂಧ–8 ರಲ್ಲಿ ಲಗತ್ತಿಸಿದ್ದು,. ಪುಟ ಸಂಖ್ಯೆ 381 ರಿಂದ 390 ರವರೆಗೆ ಇರುತ್ತವೆ.

**8) ಚಿತ್ರದುರ್ಗ ಕೋಟೆ ಪೊಲೀಸ್ ಠಾಣೆ ಪಿ.ಎ.ಆರ್ ನಂ:11/2021 ಕಲಂ 108 ಸಿಆರ್‌ಪಿಸಿ**

ಎದುರುದಾರರು ವಿರುದ್ದ ಚಿತ್ರದುರ್ಗ ಜಿಲ್ಲೆಯಲ್ಲಿ ನ್ಯಾಯಾಲಯಗಳಲ್ಲಿ ಅನೇಕ ಪ್ರಕರಣಗಳು ವರದಿಯಾಗಿದ್ದು, ಸದರಿ ಪ್ರಕರಣಗಳ ವಿಚಾರಣೆಗೆ ಸಂಬಂಧಿಸಿದಂತೆ ವಿಚಾರಣೆ ಸಮಯದಲ್ಲಿ ಸಾಕ್ಷಿದಾರರುಗಳನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿಕೊಂಡು ಕ್ರಿಮಿನಲ್ ಪ್ರಕರಣಗಳಿಂದ ಬಿಡುಗಡೆಯಾಗುವ ಪ್ರವೃತ್ತಿಯವನಾಗಿದ್ದು, ಈತನು ಸಾಕ್ಷಿದಾರರನ್ನು ಬೆದರಿಸುವ ಸ್ವಭಾದವನಿದ್ದು, ಈ ಮೂಲಕ ಆತನ ವಿರುದ್ದ ದಾಖಲಾಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಶಿಕ್ಷೆಯಿಂದ ಪಾರಾಗುವ ತಂತ್ರಗಳನ್ನು ರೂಢಿಸಿಕೊಂಡಿರುವ ವ್ಯಕ್ತಿಯಾಗಿರುತ್ತಾನೆ. ಅಲ್ಲದೇ ಪ್ರತಿವಾದಿ ಶ್ರೀನಿವಾಸ ಈತನು ದಿನಾಂಕ:08–07–2021 ರಂದು ಮುಸ್ಲಿಂ ರಾಜಕೀಯ ಪಕ್ಷವಾದ Social Democratic Party of India (SDPI) ಎಂಬ ಪಕ್ಷಕ್ಕೆ ಸೇರಿರುವುದಾಗಿ SDPI Karnataka ದ ಟ್ವೀಟರ್ ಖಾತೆಯಾದ SDPI Karnataka @ sdpikarnataka ಎಂಬ ಟ್ವಿಟರ್ ಖಾತೆಯಿಂದ ಹೊರಪಟ್ಟಿರುತ್ತದೆ.

ಎದುರುದಾರರು ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಾದ ಫೇಸ್ ಬುಕ್, ವಾಟ್ಸಪ್, ಟ್ವೀಟರ್ ಇವುಗಳನ್ನು ಉಪಯೋಗಿಸಿಕೊಳ್ಳುತ್ತಾ ಒಂದು ಕೋಮಿನ ವಿರುದ್ದ ಇನ್ನೊಂದು ಕೋಮಿನ ಜನರನ್ನು ಎತ್ತಿಕಟ್ಟಿ, ಕೋಮುಗಳ ನಡುವೆ ದ್ವೇಷ ಹುಟ್ಟಿಸುವ ಸಾರ್ವಜನಿಕ ಶಾಂತಿ ಮತ್ತು ಸೌಹಾರ್ಧತೆಗೆ ಧಕ್ಕೆ ತರುವ ಕೃತ್ಯಗಳನ್ನು ಪ್ರತಿವಾದಿಯು ಎಸಗುತ್ತಿರುವುದು ಕಂಡು ಬರುತ್ತಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಪ್ರತಿವಾದಿಯ ವಿರುದ್ಧ ಸೂಕ್ತ ಕ್ರಮವನ್ನು ತಕ್ಷಣ ಕೈಗೊಳ್ಳಬೇಕಾದ ತುರ್ತು ಸಂದರ್ಭ ಬಂದಿದ್ದರಿಂದ ಈ ಅರ್ಜಿಯನ್ನು ದಾಖಲಿಸುವ ಅಗತ್ಯತೆ ಕಂಡುಬಂದಿರುವುದರಿಂದಲೂ ಹಾಗೂ ಪ್ರತಿವಾದಿಯು ಚಿತ್ರದುರ್ಗ ನಗರದ ಆಶ್ರಯ ಲೇಔಟ್‌ನ ನಿವಾಸಿಯಾಗಿದ್ದು, ತನ್ನ ದುರ್ವರ್ತನೆಯಿಂದ ಚಿತ್ರದುರ್ಗ ನಗರ ವ್ಯಾಪ್ತಿಯಲ್ಲಿ ಸಾರ್ವಜನಿಕ ಶಾಂತಿ ಹಾಗೂ ಸೌಹಾರ್ಧತೆಗೆ ಧಕ್ಕೆ ಉಂಟು ಮಾಡುವ ಸಾಧ್ಯತೆಗಳು ಹೆಚ್ಚಾಗಿರುವುದಿರಿಂದ, ಪ್ರತಿವಾದಿಯ ವಿರುದ್ಧ ಘನ

ನ್ಯಾಯಾಲಯಕ್ಕೆ ಮುಂಜಾಗ್ರತಾ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ. ಈ ಬಗ್ಗೆ ದಾಖಲಾತಿಗಳನ್ನು ಅನುಬಂಧ-9 ರಲ್ಲಿ ಲಗತ್ತಿಸಿದ್ದು, ಪುಟ ಸಂಖ್ಯೆ 391 ರಿಂದ 401 ರವರೆಗೆ ಇರುತ್ತವೆ.

**9) ಚಿತ್ರದುರ್ಗ ನಗರ ಪೊಲೀಸ್ ಠಾಣೆ ಪಿ.ಸಿ.ಆರ್ ನಂ: 01/2021 ಕಲಂ 200 ಸಿಆರ್‌ಪಿಸಿ**

ಎದುರುದಾರರು ದಿ:26-11-2021 ರಂದು ಚಿತ್ರದುರ್ಗದ ಡಿಸಿ ಸರ್ಕಲ್ ಬಳಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ವತಿಯಿಂದ ಸಂವಿಧಾನ ದೀಕ್ಷೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಜಿಲ್ಲಾಧಿಕಾರಿಗಳ ಕಾರ್ಯಲಯ ಚಿತ್ರದುರ್ಗ ಜಿಲ್ಲೆರವರ ಕಚೇರಿ ಆದೇಶ ಸಂಖ್ಯೆ: ನಂ-ಎಂ.ಎ.ಜಿ.ಸಿಆರ್/60/2020-21 ದಿನಾಂಕ-25.11.2021 ರ ಅನ್ವಯ ಸದರಿ ಕಾರ್ಯಕ್ರಮಕ್ಕೆ ನಿಂಬಂಧನೆ ಮತ್ತು ಷರತ್ತುಗಳನ್ನು ವಿಧಿಸಿದ್ದು ಅದರಂತೆ ಕಾರ್ಯಕ್ರಮದಲ್ಲಿ ಧ್ವನಿವರ್ಧಕ ಬಳಸುವುದಕ್ಕೆ ಪೊಲೀಸ್ ಇಲಾಖೆಯ ಸಂಬಂಧಪಟ್ಟ ಪೊಲೀಸ್ ಠಾಣೆ ವ್ಯಾಪ್ತಿಯ ಠಾಣಾಧಿಕಾರಿಗಳ ಅನುಮತಿಯನ್ನು ಪಡೆಯತಕ್ಕದ್ದು ಎಂತಾ ಷರತ್ತು ಇದ್ದು, ಆದರೆ ಸದರಿ ಪ್ರತಿವಾದಿಗಳು ಚಿತ್ರದುರ್ಗ ನಗರ ಠಾಣೆಯಿಂದ ಪ್ರತಿವಾದಿಗೆ ಅನುಮತಿ ನೀಡುವ ಬಗ್ಗೆ ವಿಚಾರಣೆಯನ್ನು ಮಾಡುತ್ತಿರುವ ವೇಳೆಯಲ್ಲಿಯೇ ಅಂದರೆ ಪ್ರತಿವಾದಿ ಸಲ್ಲಿಸಿರುವ ಮನವಿಯು ವಿಚಾರಣಾ ಹಂತದಲ್ಲಿ ಇರುವಾಗ, ಸದರಿ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಸಾರ್ವಜನಿಕರು ಮತ್ತು ವಾಹನಗಳು ಸಂಚರಿಸುವ ರಸ್ತೆಯ ಮಧ್ಯೆ ಭಾಗದಲ್ಲಿ ಶಾಮಿಯಾನ ಅಳವಡಿಸಿ, ವೇದಿಕೆಯನ್ನು ನಿರ್ಮಿಸಿಕೊಂಡು, ಧ್ವನಿವರ್ಧಕವನ್ನು ಬಳಸಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅಡ್ಡಿಯನ್ನುಂಟು ಮಾಡಿ ಎಸ್.ಡಿ.ಪಿ.ಐ ಪಕ್ಷದ ಸುಮಾರು 50 ರಿಂದ 60 ಜನ ಕಾರ್ಯಕರ್ತರನ್ನು ಸೇರಿಸಿಕೊಂಡು ಸಂವಿಧಾನ ದೀಕ್ಷೆ ಕಾರ್ಯಕ್ರಮವನ್ನು ನಡೆಸಿ ಚಿತ್ರದುರ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳ ಆದೇಶವನ್ನು ಉಲ್ಲಂಘನೆ ಮಾಡಿರುತ್ತಾರೆ. ಆದ್ದರಿಂದ ಪ್ರತಿವಾದಿಯ ವಿರುದ್ಧ ಚಿತ್ರದುರ್ಗ ನಗರ ಠಾಣೆಯ ಪಿ.ಐ ಶ್ರೀ. ನಹೀಂ ಅಹಮದ್‌ರವರು ಮೇಲ್ಕಂಡಂತೆ ಪ್ರಕರಣವನ್ನು ದಾಖಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ನ್ಯಾಯಾಲಯದ ಪಿ.ಸಿ.ಆರ್ ನಂಬರ್ : 476/2021 ಆಗಿದ್ದು, ಮುಂದಿನ ಹಿಯರಿಂಗ್ ದಿನಾಂಕ 29-12-2021 ಆಗಿರುತ್ತದೆ. ಈ ಬಗ್ಗೆ ದಾಖಲಾತಿಗಳನ್ನು **ಅನುಬಂಧ-10 ರಲ್ಲಿ ಲಗತ್ತಿಸಿದ್ದು, ಪುಟ ಸಂಖ್ಯೆ 402 ರಿಂದ 416 ರವರೆಗೆ ಇರುತ್ತವೆ.**

ಸದರಿ ಕಾರ್ಯಕ್ರಮ ನಡೆಸಲು ಚಿತ್ರದುರ್ಗದ ಎಸ್.ಡಿ.ಪಿ.ಐ ವತಿಯಿಂದ ಮೇಲ್ಕಂಡ ಕಾರ್ಯಕ್ರಮ ನಡೆಸಲು ಮಾನ್ಯ ಜಿಲ್ಲಾಧಿಕಾರಿಗಳಿಂದ ನಿಬಂಧನೆಗಳನ್ನು ವಿಧಿಸಿದ ಅನುಮತಿ ಪತ್ರ ಸಂಖ್ಯೆ: ನಂ-ಎಂ.ಎ.ಜಿ.ಸಿಆರ್/60/2020-21 ದಿನಾಂಕ-25.11.2021 ನ್ನು ಪಡೆದುಕೊಂಡಿದ್ದು. ಆದರೆ ಸದರಿ ನಿಬಂಧನೆಗಳ ಪೈಕಿ ಕ್ರ.ಸಂ-3 ರಲ್ಲಿ ಸೂಚಿಸಿರುವಂತೆ ಪೊಲೀಸ್ ಇಲಾಖೆಗೆ ಧ್ವನಿವರ್ಧಕವನ್ನು ಬಳಸಲು ಅನುಮತಿ ನೀಡುವಂತೆ ಮನವಿಯನ್ನು, ಸಲ್ಲಿಸಿ ಚಿತ್ರದುರ್ಗ ನಗರ ಠಾಣೆಯಿಂದ ಪ್ರತಿವಾದಿಗೆ ಅನುಮತಿ ನೀಡುವ ಬಗ್ಗೆ ವಿಚಾರಣೆಯನ್ನು ಮಾಡುತ್ತಿರುವ ವೇಳೆಯಲ್ಲಿಯೇ ಅಂದರೆ ಪ್ರತಿವಾದಿ ಸಲ್ಲಿಸಿರುವ ಮನವಿಯು ವಿಚಾರಣಾ ಹಂತದಲ್ಲಿ ಇರುವಾಗ, ಸದರಿ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಸಾರ್ವಜನಿಕರು ಮತ್ತು ವಾಹನಗಳು ಸಂಚರಿಸುವ ರಸ್ತೆಯ ಮಧ್ಯೆ ಭಾಗದಲ್ಲಿ ಶಾಮಿಯಾನ ಅಳವಡಿಸಿ, ವೇದಿಕೆಯನ್ನು ನಿರ್ಮಿಸಿಕೊಂಡು, ಧ್ವನಿವರ್ಧಕವನ್ನು ಬಳಸಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅಡ್ಡಿಯನ್ನುಂಟು ಮಾಡಿ ನಿಬಂಧನೆ ಕ್ರ.ಸಂ.15 ರಲ್ಲಿ ಕಂಡಂತೆ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳದೇ ಎಸ್.ಡಿ.ಪಿ.ಐ ಪಕ್ಷದ ಸುಮಾರು 50 ರಿಂದ 60 ಜನ ಕಾರ್ಯಕರ್ತರನ್ನು ಸೇರಿಸಿಕೊಂಡು ಮಾನ್ಯ ಜಿಲ್ಲಾಧಿಕಾರಿಗಳ ಆದೇಶವನ್ನು ಉಲ್ಲಂಘನೆ ಮಾಡಿದ್ದಲ್ಲದೇ ಕೋವಿಡ್-19ರ ಆದೇಶ ಉಲ್ಲಂಘಿಸಿ ಸಂವಿಧಾನ ದೀಕ್ಷೆ ಕಾರ್ಯಕ್ರಮವನ್ನು ನಡೆಸಿರುತ್ತಾರೆ.

10) ಚಿತ್ರದುರ್ಗ ಕೋಟೆ ಪೊಲೀಸ್ ಠಾಣೆ ಪಿ.ಸಿ.ಆರ್ ನಂ: 01/2021 ಕಲಂ 200 ಸಿಆರ್‌ಪಿಸಿ

ಎದುರುದಾರರು ದಿ:04-12-2021 ರಂದು ಚಿತ್ರದುರ್ಗದ ಬಿ.ಡಿ.ರಸ್ತೆಯಲ್ಲಿರುವ ಎನ್.ಬಿ.ಟಿ ಹಾಲ್ ನಲ್ಲಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ವತಿಯಿಂದ ಪಕ್ಷ ಸೇರ್ಪಡೆ ಎಂಬ ಕಾರ್ಯಕ್ರಮವನ್ನು ಆಯೋಜಿಸಿದ್ದು, ಸದರಿ ಕಾರ್ಯಕ್ರಮಕ್ಕೆ ಸುಮಾರು 70-80 ಜನ ಸೇರಿದ್ದು, ಸದರಿ ಕಾರ್ಯಕ್ರಮ ನಡೆಸಲು ಯಾವುದೇ ಅನುಮತಿಯನ್ನು ಸಕ್ಷಮ ಪ್ರಾಧಿಕಾರಗಳಿಂದಾಗಲಿ, ಇಲಾಖಾ ವತಿಯಿಂದ ಆಗಲಿ ಪಡೆದುಕೊಳ್ಳದೇ ಕೋವಿಡ್-19ರ ಮಾರ್ಗಸೂಚಿಗಳನ್ನು ಪಾಲನೆ ಮಾಡಲು ವಿಫಲರಾಗಿರುವುದಲ್ಲದೆ, ಸಭೆಯಲ್ಲಿ ಯಾವುದೇ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳದೆ, ಮಾಸ್ಕ್ ಧರಿಸದೆ, ಕೋವಿಡ್ ಸೋಂಕು ಹರಡುವಿಕೆಗೆ ಸಂಬಂಧಿಸಿದಂತೆ ಇರುವ ಮಾರ್ಗಸೂಚಿಗಳನ್ನು ಉಲ್ಲಂಘನೆ ಮಾಡಿ ಕಾರ್ಯಕ್ರಮವನ್ನು ನಡೆಸಿರುತ್ತಾರೆ. ಆದ್ದರಿಂದ ಪ್ರತಿವಾದಿಯ ವಿರುದ್ಧ ಚಿತ್ರದುರ್ಗ ಕೋಟೆ ಪೊಲೀಸ್ ಠಾಣೆಯಲ್ಲಿ ಮೇಲ್ಕಂಡಂತೆ ಪ್ರಕರಣ ದಾಖಲಾಗಿರುತ್ತದೆ. ಸದರಿ ಪ್ರಕರಣದಲ್ಲಿ ನ್ಯಾಯಾಲಯದ ಪಿ.ಸಿ.ಆರ್ ನಂಬರ್ : 58/2021 ಆಗಿದ್ದು, ಮುಂದಿನ ಹಿಯರಿಂಗ್ ದಿನಾಂಕ : 05-03-2022 ಆಗಿರುತ್ತದೆ.

ಎದುರುದಾರರು ದಿ:04-12-2021 ರಂದು ಚಿತ್ರದುರ್ಗದ ಬಿ.ಡಿ.ರಸ್ತೆಯಲ್ಲಿರುವ ಎನ್.ಬಿ.ಟಿ ಹಾಲ್ ನಲ್ಲಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ವತಿಯಿಂದ ಪಕ್ಷ ಸೇರ್ಪಡೆ ಎಂಬ ಕಾರ್ಯಕ್ರಮವನ್ನು ಆಯೋಜಿಸಿದ್ದು ಹಾಲಿ ನೆಡೆಯುತ್ತಿರುವ ಎಂ.ಎಲ್.ಸಿ ಚುನಾವಣೆ ನೀತಿ ಸಂಹಿತೆ ಇರುವ ಸಲುವಾಗಿ ಚುನಾವಣಾಧಿಕಾರಿಗಳಿಂದ ಎಸ್.ಡಿ.ಪಿ.ಐ ಪಕ್ಷದವರು ಅನುಮತಿಯನ್ನು ಪಡೆಯದೇ ಕಾರ್ಯಕ್ರಮ ನಡೆಸಲು ಪೊಲೀಸ್ ಇಲಾಖೆ ವತಿಯಿಂದ ಧ್ವನಿವರ್ಧಕವನ್ನು ಬಳಸಲು ಸಹ ಅನುಮತಿಯನ್ನು ಪಡೆದುಕೊಳ್ಳದೇ ಕೋವಿಡ್-19 ಮಾರ್ಗಸೂಚಿಗಳನ್ನು ಪಾಲನೆ ಮಾಡಲು ವಿಫಲರಾಗಿ ಸಭೆಯಲ್ಲಿ ಸುಮಾರು *70-80 ಜನ ಸೇರಿಸಿಕೊಂಡು, ಯಾವುದೇ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳದೇ, ಮಾಸ್ಕ್ ಧರಿಸದೇ, ಕೋವಿಡ್ ಸೋಂಕು ಹರಡುವಿಕೆಗೆ ಸಂಬಂಧಿಸಿದಂತೆ ಇರುವ ಮಾರ್ಗಸೂಚಿಗಳನ್ನು ಉಲ್ಲಂಘನೆ ಮಾಡಿ ಕಾರ್ಯಕ್ರಮವನ್ನು ನಡೆಸಿರುತ್ತಾರೆ. ಆದ್ದರಿಂದ ಪ್ರತಿವಾದಿಯ ವಿರುದ್ಧ ಚಿತ್ರದುರ್ಗ ಕೋಟೆ ಠಾಣೆಯಲ್ಲಿ ಮೇಲ್ಕಂಡಂತೆ ಪ್ರಕರಣ ದಾಖಲಾಗಿರುತ್ತದೆ. ಈ ಬಗ್ಗೆ ದಾಖಲಾತಿಗಳನ್ನು ಅನುಬಂಧ-11 ರಲ್ಲಿ ಲಗತ್ತಿಸಿದ್ದು, ಪುಟ ಸಂಖ್ಯೆ 417 ರಿಂದ 435 ರವರೆಗೆ ಇರುತ್ತವೆ.

ಸದರಿ ಎದುರುದಾರರ ಮೇಲೆ ಸಾರ್ವಜನಿಕ ಸುವ್ಯವಸ್ಥೆ ಹಾಗೂ ಸಾರ್ವಜನಿಕ ಆಸ್ತಿಪಾಸ್ತಿ ಹಾನಿಗೆ ಸಂಬಂಧಿಸಿದಂತೆ ಕಳೆದ 05 ವರ್ಷಗಳಲ್ಲಿ 07 ಪ್ರಕರಣಗಳು ಇತರೆ 03 ಪ್ರಕರಣಗಳು ಸೇರಿ ಒಟ್ಟು 10 ಪ್ರಕಣಗಳು ದಾಖಲಾಗಿರುತ್ತವೆ.

ಎದುರುದಾರನು ಪೊಲೀಸ್ ಅಧಿಕಾರಿಗಳ ನೈತಿಕ ಸ್ಥೈರ್ಯವನ್ನು ಕುಗ್ಗಿಸಲು ಹಾಗೂ ಆ ಮೂಲಕ ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ತರುವ ಉದ್ದೇಶದಿಂದ ದಿನಾಂಕ 23.04.2021 ರಂದು ಡಿವೈ.ಎಸ್.ಪಿ ಶ್ರೀ ಪಾಂಡುರಂಗ ರವರ ಅಮಾನತಿಗೆ ಆಗ್ರಹಿಸಿ ಸುದ್ದಿಗೋಷ್ಠಿ ಮಾಡಿರುತ್ತಾನೆ. ಸದರಿ ಪ್ರತಿವಾದಿಯು ಸರ್ಕಾರಿ ಅಧಿಕಾರಿಗಳ ವಿರುದ್ಧ ಅನಗತ್ಯವಾಗಿ ಸುಳ್ಳು ಆರೋಪ ಮಾಡುವ ಮನಸ್ಥಿತಿಯಲ್ಲಿ ಇದ್ದು, ಇದರ ಪರಿಣಾಮವಾಗಿ

ಶ್ರೀ ಹೆಚ್.ಶ್ರೀನಿವಾಸ್ @ ಬಾಳೆ ಕಾಯಿ ಸೀನ @ ಮಚ್ಚು ಸೀನ ಈತನು ತನ್ನ ಮೇಲೆ ನಗರ ಉಪ-ವಿಭಾಗದ ಡಿವೈ.ಎಸ್.ಪಿ ಶ್ರೀ ಪಾಂಡುರಂಗ ರವರು ಗೂಂಡಾ ಕಾಯ್ದೆ ಜಾರಿ ಮಾಡಲು ಹೊರಟಿದ್ದಾರೆ ಎಂದು ಛಲವಾದಿ ಗುರು ಪೀಠದ ಶ್ರೀ ಬಸವನಾಗಿದೇವ ಸ್ವಾಮೀಜಿ ರವರೊಂದಿಗೆ ದಲಿತ ಮುಖಂಡರನ್ನು ಸೇರಿಸಿಕೊಂಡು ಸುದ್ದಿಗೋಷ್ಠಿಯನ್ನು ನಡೆಸುವ ಮೂಲಕ ಡಿವೈ.ಎಸ್.ಪಿ ರವರ ಅಮಾನತ್ತಿಗೆ ಆಗ್ರಹಿಸಿರುತ್ತಾರೆ. ಈ ಬಗ್ಗೆ ದಾಖಲಾತಿಗಳನ್ನು ಅನುಬಂಧ-13 ರಲ್ಲಿ ಲಗತ್ತಿಸಿದ್ದು, ಪುಟ ಸಂಖ್ಯೆ 439 ರಿಂದ 444 ವರೆಗೆ ಇರುತ್ತವೆ.

ಈ ಮೂಲಕ ಪೊಲೀಸ್ ಇಲಾಖೆಯು ತನ್ನ ಅಕ್ರಮ ಚಟುವಟಿಕೆಗಳನ್ನು ಸಾರ್ವಜನಿಕರ ಸುವ್ಯವಸ್ಥೆಗೆ ಭಂಗ ತರುತ್ತಿರುವುದಕ್ಕೆ ಕಡಿವಾಣ ಹಾಕಲು ಪ್ರತಿ ಬಂಧಕ ಪ್ರಕರಣಗಳನ್ನು ದಾಖಲಿಸಲು ಚಿಂತನೆ ನಡೆಸುತ್ತಿರುವ ಸಮಯದಲ್ಲಿ, ಎದುರುದಾರನು ವಿಷಯ ತಿಳಿದು ಪೊಲೀಸ್ ಇಲಾಖೆಯ ಮೇಲೆ ಒತ್ತಡ ತರಲು ಮತ್ತು ಸಾರ್ವಜನಿಕರಲ್ಲಿ ತನ್ನ ಗುಂಪು ಬಲ ಪ್ರದರ್ಶಿಸಲು, ದಿ:23.04.2021 ರಂದು ತನ್ನ ಮಠದ ಸ್ವಾಮೀಜಿಗಳು ಮತ್ತು ತನ್ನ ಹಿಂಬಾಲಕರೊಂದಿಗೆ ತನ್ನನ್ನು ಗೂಂಡಾ ಅಧಿನಿಯಮದಡಿ ಬಂಧಿಸಬಾರದು ಎಂದು ಆಗ್ರಹಿಸಿ, ತಾನು ಎಷ್ಟು ಗಂಡಾಂತರಕಾರಿಯಾದ ವ್ಯಕ್ತಿ ಎಂದು ಬಲಪಡಿಸಲು ಪ್ರತಿಭಟನೆ ನಡೆಸುವ ಮೂಲಕ ಜನ ಸಾಮಾನ್ಯರಿಗೂ ಸಹ ನೆಮ್ಮದಿ ಜೀವನ ನಡೆಸದಂತೆ ಈ ರೀತಿ ಅಕ್ರಮ ಕೃತ್ಯಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾನೆ, ಈತನನ್ನು ತಡೆಯದೇ ಇದ್ದಲ್ಲಿ ಇದೇ ರೀತಿಯ ಪ್ರತಿಭಟನೆಗಳನ್ನು ಮಾಡುವ ಸಾಧ್ಯತೆ ಇರುತ್ತದೆ.

ಈ ಎಲ್ಲಾ ಸಂಗತಿಗಳನ್ನು ಗಮನಿಸಿದಾಗ ಈ ಕೆಳಕಂಡ ಪರಿಗಣಿತ ಅಂಶಗಳನ್ನು ರಚಿಸಲಾಗಿದೆ.

1. ಅರ್ಜಿದಾರರು ಎದುರುದಾರನು ಸಾರ್ವಜನಿಕ ಸುವ್ಯವಸ್ಥೆಗೆ ತೀವ್ರವಾಗಿ ಧಕ್ಕೆಯಾಗುವಂತೆ ಗೂಂಡಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಬಗ್ಗೆ ಸಾಬೀತುಪಡಿಸುತ್ತಾರೆಯೇ?
2. ಎದುರುದಾರನು ಸದರಿ ಅಧಿನಿಯಮದ ಗೂಂಡಾ ಪದದ ವ್ಯಾಖ್ಯಾನದಡಿ ಬರುವ ವ್ಯಕ್ತಿಯಾಗಿರುತ್ತಾನೆಯೇ?
3. ಅರ್ಜಿದಾರರ ಅರ್ಜಿಯು ಪುರಸ್ಕರಿಸಲು ಯೋಗ್ಯವಾಗಿದೆಯೇ?
4. ಯಾವ ಆದೇಶ?

## ಕಾರಣಗಳು

ಮೇಲ್ಕಾಣಿಸಿದ ಪರಿಗಣಿತ ಅಂಶಗಳು ಒಂದಕ್ಕೊಂದು ಅವಲಂಬಿತವಾಗಿದ್ದು, ಕಾರಣ 1 ರಿಂದ 3 ಅಂಶಗಳನ್ನು ಒಟ್ಟಾರೆಯಾಗಿ ಪರಿಗಣಿಸಿ ಉತ್ತರಿಸಲಾಗಿದೆ.

ಅರ್ಜಿದಾರರು ಆಪಾದಿಸುವಂತೆ ಎದುರುದಾರನು ಚಿತ್ರದುರ್ಗ ಜಿಲ್ಲೆ ಕೋಟೆ ಪೊಲೀಸ್ ಠಾಣೆ ವ್ಯಾಪ್ತಿಯ ಚಿತ್ರದುರ್ಗ ನಗರದ ರಾಜೀವ್‌ಗಾಂಧಿ ಆಶ್ರಯ ಬಡಾವಣೆಯ 2ನೇ ಹಂತದಲ್ಲಿ ವಾಸವಾಗಿದ್ದು, ತನ್ನ ಶಿಕ್ಷಣವನ್ನು 7ನೇ ತರಗತಿಯವರೆಗೆ ಪೂರೈಸಿದ್ದು, ಆತನಿಗೆ ಕನ್ನಡ ಓದಲು, ಬರೆಯಲು ಮತ್ತು ಅರ್ಥ ಮಾಡಿಕೊಳ್ಳಲು

ಬರುತ್ತದೆ ಎಂದು ಉಲ್ಲೇಖಿಸಿರುತ್ತಾರೆ. ಎದುರುದಾರನು 7ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದರ ಬಗ್ಗೆ ವ್ಯಾಸಂಗ ಪ್ರಮಾಣಪತ್ರವನ್ನು ಸಂಗ್ರಹಿಸಿರುವುದು ಕಂಡುಬರುತ್ತದೆ.

ಎದುರುದಾರನು ಮೊದಮೊದಲು ಸಣ್ಣಮಟ್ಟ ಅಪರಾಧಗಳಲ್ಲಿ ತೊಡಗಿಸಿಕೊಂಡಿದ್ದು, ನ್ಯಾಯಾಲಯಗಳಲ್ಲಿ ದಂಡ ಶಿಕ್ಷೆಯನ್ನು ಅನುಭವಿಸಿದ ನಂತರ ಮತ್ತು ಸನ್ನಡತೆಗಾಗಿ ಕಾರ್ಯ ನಿರ್ವಾಹಕ ದಂಡಾಧಿಕಾರಿಗಳಿಗೆ ಮುಚ್ಚಳಿಕೆಯನ್ನು ಬರೆದು ಕೊಟ್ಟಾಗಿಯೂ ಕೂಡ, ಕಾನೂನಿಗೆ ಯಾವುದೇ ಗೌರವವನ್ನು ಕೊಡದೆ ತನ್ನ ಅಪರಾಧಿಕ ಚಟುವಟಿಕೆಗಳನ್ನು ಮುಂದುವರೆಸುತ್ತಾ, ಬರಬರುತ್ತಾ ಘೋರ ಸ್ವರೂಪದ ಅಪರಾಧಗಳನ್ನು ಎಸಗತೊಡಗಿದ. ಸರ್ಕಾರಿ ಅಧಿಕಾರಿಗಳಿಗೆ ಮತ್ತು ಕಾನೂನಿಗೆ ಯಾವುದೇ ಗೌರವವನ್ನು ಕೊಡದೆ ತನ್ನ ಅಕ್ರಮ ಚಟುವಟಿಕೆಗಳಿಗೆ ಜನರನ್ನು ಸೇರಿಸಿಕೊಂಡು ಸಾರ್ವಜನಿಕ ಸುವ್ಯವಸ್ಥೆಗೆ ತೀವ್ರವಾದ ಧಕ್ಕೆಯನ್ನುಂಟುಮಾಡುವ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಏಕೆಂದರೆ, ಮೊದಲು ಕೇವಲ ಜಿಲ್ಲಾಧಿಕಾರಿಗಳ ಆದೇಶವನ್ನು ಉಲ್ಲಂಘಿಸಿದ್ದರ ಪ್ರಕರಣ ದಾಖಲಾಗಿದ್ದರೆ, ತದನಂತರ ಪ್ರತಿವಾದಿಯು ಕೋಮು ಗಲಭೆ ಎಬ್ಬಿಸಬೇಕೆನ್ನುವ ದುರುದ್ದೇಶದಿಂದ ಟಿಪ್ಪು ಜಯಂತಿಯ ಆಚರಣೆಯ ಪರ ಮತ್ತು ವಿರೋಧವಾಗಿ ಕರಪತ್ರಗಳನ್ನು ಹಂಚುವ ವಿಚಾರವಾಗಿ ಯಾರೋ ಹುಡುಗರು ಚಿತ್ರದುರ್ಗ ನಗರದ ಗಾಂಧಿ ಸರ್ಕಲ್‌ನಲ್ಲಿ ಗಲಾಟೆ ಮಾಡಿಕೊಂಡಿದ್ದು, ಇದೇ ವಿಚಾರವಾಗಿ ಪರ ಮತ್ತು ವಿರೋಧ ವ್ಯಕ್ತಪಡಿಸುವ ಎರಡು ಗುಂಪುಗಳು ಸೇರಿಕೊಂಡು ಚಿತ್ರದುರ್ಗ ನಗರದ ನಗರ ಪೊಲೀಸ್ ಠಾಣೆಯ ಮುಂಭಾಗ ಜಮಾಯಿಸಿ ಆರೋಪಿ ಶ್ರೀನಿವಾಸನು ಸುಮಾರು 50–60 ಜನರನ್ನು ಅಕ್ರಮ ಗುಂಪು ಸೇರಿಸಿಕೊಂಡು ಘೋಷಣೆಗಳನ್ನು ಕೂಗುತ್ತಾ ಪೊಲೀಸರು ನೀಡಿದ ಸೂಚನೆಗಳನ್ನು ಉಲ್ಲಂಘಿಸಿ ಪೊಲೀಸ್ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಯವರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಬಗ್ಗೆ ಪ್ರಕರಣ ದಾಖಲಾಗಿದ್ದನ್ನು ಗಮನಿಸಿದರೆ, ಪ್ರತಿವಾದಿಯು ಕಾನೂನನ್ನು ತನ್ನ ಕೈಗೆತ್ತಿಕೊಂಡು ಸಾರ್ವಜನಿಕ ಸುವ್ಯವಸ್ಥೆಗೆ ತೀವ್ರ ದಕ್ಕೆಯನ್ನುಂಟುಮಾಡುವ ಎಲ್ಲಾ ಸನ್ನಿವೇಶಗಳು ಮೇಲ್ನೋಟಕ್ಕೆ ರುಜುವಾತಾಗುತ್ತಿದ್ದು, ಇವರು ಇತ್ತೀಚೆಗೆ ಎಸ್‌ಡಿಪಿಐ ಸಂಘಟನೆಯಲ್ಲೂ ಸಹ ತಮ್ಮನ್ನು ತೊಡಗಿಸಿಕೊಂಡಿದ್ದು, ಇವರು ಈ ರೀತಿ ಸಂಘಟನೆಗಳಲ್ಲಿ ತೊಡಗಿಸಿಕೊಂಡು ಹಬ್ಬಗಳಲ್ಲಿ ಸಂಘಟನೆಗಳನ್ನು ಮಾಡಿಕೊಂಡು, ಸಮಾನತೆಯ ಹೆಸರಿನಲ್ಲಿ ನಗರದ ತುಂಬಾ ಯಾತ್ರೆಗಳನ್ನು ಮಾಡಿಕೊಂಡು ಗಲಭೆಗಳನ್ನು ಮಾಡುವ ಪ್ರವೃತ್ತಿಯನ್ನು ಬೆಳಸಿಕೊಂಡಿರುವ ಕಾರಣದಿಂದಲೂ ಹಾಗೂ ಈ ಹಿಂದೆ ಸಹ ದಲಿತ ಮಹಾ ಗಣತಿಯ ಹೆಸರಲ್ಲಿ ಗಣೇಶ ವಿಗ್ರಹ ಪ್ರತಿಷ್ಠಾಪನೆ ಮಾಡಿ ಸಾರ್ವಜನಿಕ ನೆಮ್ಮದಿಗೆ ಭಂಗಉಂಟುಮಾಡಿರುತ್ತಾರೆ. ಇದರಿಂದ ಸಮಾಜದ ನಾಗರೀಕರಿಗೆ ನೆಮ್ಮದಿಯಿಂದ ಜೀವನ ಮಾಡಲು ಹಾಗೂ ಶಾಂತಿಯಿಂದ ತಮ್ಮ ದೈನಂದಿನ ಜೀವನ ನಡೆಸಲು ಕಷ್ಟಸಾಧ್ಯವಾಗುತ್ತಿದ್ದು, ಪ್ರತಿವಾದಿಯ ಈ ಗೂಂಡಾ ವರ್ತನೆಯನ್ನು ತಡೆಯಬೇಕಾದಲ್ಲಿ ಆತನನ್ನು ಪ್ರತಿಬಂಧಕವಾಗಿ ಬಂಧಿಸಿ ನ್ಯಾಯಾಂಗ ಬಂಧನದಲ್ಲಿಡುವುದು ಸೂಕ್ತ ಕ್ರಮವಾಗಿರುತ್ತದೆ ಎಂದು ಉಲ್ಲೇಖಿಸಿದ್ದು, ಈ ಅಂಶಗಳಿಂದ ಎದುರುದಾರನು **ಕರ್ನಾಟಕ ಅಕ್ರಮ ಭಟ್ಟಿ ಸಾರಾಯಿ ಇಳಿಸುವವರ ಔಷಧ ಕಾನೂನು ಉಲ್ಲಂಘಿಸುವವರ ಜೂಜು ಕೋರರು, ಗೂಂಡಾಗಳು, ಅನೈತಿಕ ವ್ಯವಹಾರಗಳು ವೃತ್ತಿಯಲ್ಲಿ ತೊಡಗುವವರ, ಕೊಳಚೆ ಪ್ರದೇಶದ ಅಕ್ರಮಣದಾರರು ಇವರ ಅಪಾಯಕಾರಿ ಚಟುವಟಿಕೆಗಳ ತಡೆ ಕಾಯ್ದೆ-1985** ಅಡಿಯಲ್ಲಿ ಕಲಂ 2(iv) ಅಡಿಯಲ್ಲಿ ಉಲ್ಲೇಖಿಸಿದಂತೆ "in the case of a goonda when he is engaged, or is making preparations for engaging, in any of his activities as a goonda which affect adversely or are likely to affect adversely the maintenance of public order"

ಅಂಶವನ್ನು ಪರಿಗಣಿಸಿದಾಗ ಎದುರುದಾರನು ತನ್ನ ಗೂಂಡಾ ಚಟುವಟಿಕೆಗಳಿಂದ ಸಾರ್ವಜನಿಕ ಸುವ್ಯವಸ್ಥೆ ಪಾಲನೆಗೆ ವಿರುದ್ಧವಾಗಿ ನಡೆದುಕೊಳ್ಳುತ್ತಾ, ಸಾರ್ವಜನಿಕ ಸುವ್ಯವಸ್ಥೆಗೆ ತೀವ್ರವಾಗಿ ಧಕ್ಕೆ ತರುತ್ತಿರುವುದು ಮೇಲ್ನೋಟಕ್ಕೆ ಸಾಬೀತಾಗುತ್ತಿದ್ದು, ಈ ಅಂಶವನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

ಎದುರುದಾರನು ಕರ್ನಾಟಕ ಅಕ್ರಮ ಭಟ್ಟಿ ಸಾರಾಯಿ ಇಳಿಸುವವರ ಔಷಧ ಕಾನೂನು ಉಲ್ಲಂಘಿಸುವವರ ಜೂಜು ಕೂರರು ಗೂಂಡಾಗಳು ಅನೈತಿಕ ವ್ಯವಹಾರಗಳು ವೃತ್ತಿಯಲ್ಲಿ ತೊಡಗುವವರ, ಕೊಳಚೆ ಪ್ರದೇಶದ ಅಕ್ರಮಣದಾರರು ಇವರ ಅಪಾಯಕಾರಿ ಚಟುವಟಿಕೆಗಳ ತಡೆ ಕಾಯ್ದೆ–1985 ಅಡಿಯಲ್ಲಿ ಕಲಂ 2(g) ಅಡಿಯಲ್ಲಿ ಗೂಂಡಾ ಪದವನ್ನು ವ್ಯಾಖ್ಯಾನಿಸಿರುವ ಅಡಿಯಲ್ಲಿ ಬರುತ್ತಾನೆಯೇ? ಎಂಬುದನ್ನು ಪರಿಶೀಲಿಸಿದಾಗ ಸದರಿ ವ್ಯಾಖ್ಯಾನವು ಈ ಕೆಳಗಿನಂತಿರುತ್ತದೆ.

"(g) "goonda" means a person who either by himself or as a member of or leader of a gang, habitually commits or attempts to commit or abets the commission of offences punishable [under Chapter VIII, ChapterXV, Chapter XVI] Chapter XVII or Chapter XXII of the Indian Penal Code (Central Act XLV of 1860)"

ಎದುರುದಾರನ ವಿರುದ್ಧ ಈ ಕೆಳಗಿನ ಅಪರಾಧಿಕ ಪ್ರಕರಣಗಳು ದಾಖಲಾಗಿರುವ ಬಗ್ಗೆ ದಾಖಲಾತಿಗಳು ಕಂಡುಬರುತ್ತವೆ. ಅವುಗಳು ಈ ಕೆಳಗಿನಂತಿರುತ್ತವೆ.

1. ಚಿತ್ರದುರ್ಗ ನಗರ ಪೊಲೀಸ್ ಠಾಣೆ ಗುನ್ನೆ ನಂ:519/2016 ಕಲಂ 188 ಐಪಿಸಿ
2. ಚಿತ್ರದುರ್ಗ ನಗರ ಪೊಲೀಸ್ ಠಾಣೆ ಗುನ್ನೆ ನಂ:520/16 ಕಲಂ 3 ಕರ್ನಾಟಕ ಓಪನ್ ಪ್ಲೇಸ್ ಡಿಸ್‌ಫಿಗರ್‌ಮೆಂಟ್ ಆಕ್ಟ್–1951, 1981 ಕಲಂ 115, 133 ಮುನ್ಸಿಪಾಲಿಟಿ ಆಕ್ಟ್–1964.
3. ಚಿತ್ರದುರ್ಗ ನಗರ ಪೊಲೀಸ್ ಠಾಣೆ ಗುನ್ನೆ ನಂ: 605/16 ಕಲಂ 143, 147, 353, 153 ರೆ/ವಿ 149 ಐಪಿಸಿ
4. ಚಿತ್ರದುರ್ಗ ಕೋಟೆ ಪೊಲೀಸ್ ಠಾಣೆ ಗುನ್ನೆ ನಂ: 22/2019 ಕಲಂ 323, 324, 506, 504 ಐಪಿಸಿ.
5. ಚಿತ್ರದುರ್ಗ ಕೋಟೆ ಪೊಲೀಸ್ ಠಾಣೆ ಗುನ್ನೆ ನಂ: 19/2020 ಕಲಂ 153, 505 (2) ಐಪಿಸಿ.
6. ಚಿತ್ರದುರ್ಗ ಕೋಟೆ ಪೊಲೀಸ್ ಠಾಣೆ ಗುನ್ನೆ ನಂ: 156/2020 ಕಲಂ 153(ಎ) 505 (2) ಐಪಿಸಿ ಮತ್ತು ಕಲಂ 3 ಕರ್ನಾಟಕ ಓಪನ್ ಪ್ಲೇಸ್ ಡಿಸ್‌ಫಿಗರ್‌ಮೆಂಟ್ ಆಕ್ಟ್–1951, 1981.
7. ಚಿತ್ರದುರ್ಗ ಕೋಟೆ ಪೊಲೀಸ್ ಠಾಣೆ ಗುನ್ನೆ ನಂ: 166/2020 ಕಲಂ 182, 420 ಐಪಿಸಿ.
8. ಚಿತ್ರದುರ್ಗ ಕೋಟೆ ಪೊಲೀಸ್ ಠಾಣೆ ಪಿ.ಎ.ಆರ್ ನಂ:11/2021 ಕಲಂ 108 ಸಿಆರ್‌ಪಿಸಿ
9. ಚಿತ್ರದುರ್ಗ ನಗರ ಪೊಲೀಸ್ ಠಾಣೆ ಪಿ.ಸಿ.ಆರ್ ನಂ: 01/2021 ಕಲಂ 200 ಸಿಆರ್‌ಪಿಸಿ
10. ಚಿತ್ರದುರ್ಗ ಕೋಟೆ ಪೊಲೀಸ್ ಠಾಣೆ ಪಿ.ಸಿ.ಆರ್ ನಂ: 01/2021 ಕಲಂ 200 ಸಿಆರ್‌ಪಿಸಿ

ಸದರಿ 10 ಪ್ರಕರಣಗಳಿಗೆ ಸಂಬಂದಿಸಿದಂತೆ ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಸದರಿ ಎದುರುದಾರನ ವಿರುದ್ಧ ಭಾ.ದಂ.ಸಂ.ಯ ಅಧ್ಯಾಯ–8, 16, 17 ಹಾಗೂ 22 ಗಳಲ್ಲಿ ಬರುವ ಅಪರಾಧಗಳನ್ನು ಎಸಗಿರುವುದು ಕಂಡುಬರುತ್ತದೆ.

ಸದರಿ ಅಧಿನಿಯಮದ ಕಲಂ 2(g) ಅಡಿಯಲ್ಲಿ ನಿಗಧಿಪಡಿಸಿರುವಂತೆ ಯಾವುದೇ ವ್ಯಕ್ತಿ ರೂಢೀಗತವಾಗಿ ಭಾ.ದಂ.ಸಂ.ಯ ಅಧ್ಯಾಯಗಳಾದ 8, 15, 16, 17 ಅಥವಾ ಅಧ್ಯಾಯ–22 ಗಳಲ್ಲಿ ಉಲ್ಲೇಖಿಸಿದ ಶಿಕ್ಷಾರ್ಹ ಅಪರಾಧಗಳನ್ನು ಎಸಗಿದ ಅಥವಾ ಎಸಗುವ ಪ್ರಯತ್ನ ಅಥವಾ ಪ್ರೇರೇಪಿಸುವಂತಹ ಕೃತ್ಯಗಳನ್ನು ಎಸಗಿದ್ದು ಕಂಡುಬಂದಲ್ಲಿ ಅಂತಹ ವ್ಯಕ್ತಿಯನ್ನು ಗೂಂಡಾ ಎಂದು ಪರಿಗಣಿಸಬೇಕಾಗುತ್ತದೆ. ಎದುರುದಾರನ ವಿರುದ್ಧ ದಾಖಲಾದ ಮೇಲ್ಕಾಣಿಸಿದ 10 ಪ್ರಕರಣಗಳನ್ನು ಪರಿಶೀಲಿಸಿದಾಗ ಆತನ ವಿರುದ್ಧ ಸದರಿ ವ್ಯಾಖ್ಯಾನದಲ್ಲಿ ಉಲ್ಲೇಖಿತ ಅಪರಾಧಗಳು ಅನ್ವಯವಾಗುತ್ತಿದ್ದು, ಆದ್ದರಿಂದ ಅರ್ಜಿದಾರರು ಎದುರುದಾರನು ಸದರಿ ಅಧಿನಿಯಮದ ಗೂಂಡಾ ಪದದ ವ್ಯಾಖ್ಯಾನದಡಿ ಬರುವ ವ್ಯಕ್ತಿಯಾಗಿರುತ್ತಾನೆಂದು ಮೇಲ್ನೋಟಕ್ಕೆ ಸಾಬೀತುಪಡಿಸಿರುತ್ತಾರೆ ಎಂದು ಅಭಿಪ್ರಾಯಪಡುತ್ತೇನೆ. ಆದ್ದರಿಂದ 2ನೇ ಪರಿಗಣಿತ ಅಂಶವನ್ನು ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

ಅರ್ಜಿದಾರನು ತನ್ನ ಅರ್ಜಿಯಲ್ಲಿ ಎದುರುದಾರನಿಂದ ಸಾರ್ವಜನಿಕ ವಲಯದಲ್ಲಿ ನಾಗರೀಕರಿಗೆ ತೀವ್ರತರವಾದ ಆಂತಕ ಹಾಗೂ ಭಯ ಉಂಟಾಗುತ್ತಿದ್ದು, ಈತನ ಸಕ್ರಿಯ ಚಟುವಟಿಕೆಗಳಿಂದ ಸಾರ್ವಜನಿಕರಲ್ಲಿ ಭಯದ ವಾತಾವರಣ ಸೃಷ್ಠಿಯಾಗಿದ್ದು, ಸಾರ್ವಜನಿಕರ ನೆಮ್ಮದಿಗೆ ಹಾಗೂ ಶಾಂತಿಗೆ ಹಾಗೂ ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ಬರುವ ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿಯುಂಟಾಗುವ ಸಂಭವ ಇರುವುದರಿಂದ ಸಮಾಜದ ಹಿತದೃಷ್ಠಿಯಿಂದ ಈತನನ್ನು ಗೂಂಡಾ ಕಾಯ್ದೆಯಡಿಯಲ್ಲಿ ಬಂಧನದಲ್ಲಿ ಇಡುವುದು ಅವಶ್ಯವಾಗಿರುತ್ತದೆ. ಕೋಟೆ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಹಾಗೂ ಚಿತ್ರದುರ್ಗ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ನಿರಂತರವಾಗಿ ಸಮಾಜದಲ್ಲಿ ವಿರೋಧಿ ಚಟುವಟಿಕೆಗಳನ್ನು ಹಾಗೂ ಸಾರ್ವಜನಿಕ ಸುವಸ್ಯವಸ್ಥೆಗೆ ಧಕ್ಕೆಯನ್ನು ಉಂಟುಮಾಡುವ ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿಯನ್ನು ಉಂಟುಮಾಡುವ ಚಟುವಟಿಕೆಗಳಲ್ಲಿ ಸಕ್ರಿಯನಾಗಿದ್ದು ಇದರಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ನಾಗರೀಕರು ನೆಮ್ಮದಿಯಿಂದ ಜೀವನ ಮಾಡುವ ಅವಕಾಶದಿಂದ ವಂಚಿತರಾಗಿದ್ದು, ಪ್ರತಿವಾದಿಯು ಗೂಂಡಾ ಕಾಯ್ದೆಯಲ್ಲಿನ ಗೂಂಡಾ ಪದದ ವ್ಯಾಖ್ಯಾನದಡಿ ಬರುವ ವ್ಯಕ್ತಿಯಾಗಿದ್ದು ಆತನು ಭಾರತ ದಂಡ ಸಂಹಿತೆಯ ಅಧ್ಯಾಯ 8, 14, 16, 17, 22ರ ಅಡಿ ಅಪರಾಧಗಳನ್ನು ಎಸಗುವ ಪ್ರವೃತ್ತಿಯುಳ್ಳವನಾಗಿದ್ದು, ಇದರಿಂದ ಸಮಾಜದ ಸ್ವಾಸ್ತ್ಯಕ್ಕೆ ಗಂಡಾಂತರಕಾರಿ ವ್ಯಕ್ತಿಯಾಗಿರುವುದರಿಂದ ಸಾರ್ವಜನಿಕ ಶಾಂತಿ ಸುವ್ಯವಸ್ಥೆ ಹಾಗೂ ಸಾಮಾಜಿಕ ಸ್ವಾಸ್ತ್ಯವನ್ನು ಕಾಪಾಡಲು ಪ್ರತಿಬಂಧಕವಾಗಿ ಪ್ರತಿವಾದಿಯನ್ನು ಸದರಿ ಅಧಿನಿಯಮದ ಅಡಿ ಬಂಧಿಸಿ ಸ್ಥಾನ ಬದ್ಧತೆಯಲ್ಲಿಡುವುದು ಅತ್ಯಂತ ಅವಶ್ಯವಾಗಿರುತ್ತದೆ, ಇಲ್ಲದಿದ್ದಲ್ಲಿ ಸಾರ್ವಜನಿಕರ ಸಂವಿಧಾನಾತ್ಮಕ ಹಕ್ಕುಗಳಿಗೆ, ಶಾಂತಿಯುತ ಜೀವನಕ್ಕೆ ಮತ್ತು ಸಾಮಾಜಿಕ ಸುವ್ಯವಸ್ಥೆಗೆ ತೀರ್ವತರನಾದ ತೊಂದರೆ ಹಾಗೂ ಧಕ್ಕೆ ಉಂಟಾಗುತ್ತದೆ. ಎದುರುದಾರನು ಒಬ್ಬ ಅಪರಾಧಿಕ ಮನೋಭಾವವುಳ್ಳ ವ್ಯಕ್ತಿಯಾಗಿ ಸಮಾಜಕ್ಕೆ ಕಂಟಕ ಪ್ರಾಯನಾಗಿ ಸಾರ್ವಜನಿಕರ ಸಂವಿಧಾನತ್ಮಕ ಹಕ್ಕುಗಳಿಗೆ ಧಕ್ಕೆಯನ್ನುಂಟುಮಾಡುತ್ತಾ ಸಾರ್ವಜನಿಕರ ಸುವ್ಯಸ್ಥೆಗೆ ಗಂಡಾಂತರಕಾರಿಯಾಗಿರುವುದಲ್ಲದೇ ಸರ್ಕಾರಿ ನೌಕರರಿಗೂ ಕೂಡ ಸರ್ಕಾರಿ ಕರ್ತವ್ಯಗಳನ್ನು ನಿರ್ಭೀತಿಯಿಂದ ನಿರ್ವಹಿಸಲು ಬಿಡದೆ

ತೊಂದರೆಯನ್ನುಂಟುಮಾಡುವ ವ್ಯಕ್ತಿಯಾಗಿರುತ್ತಾನೆ. ಇದಕ್ಕೆ ಪೂರಕವಾಗಿ ಎದುರುದಾರನ ವಿರುದ್ಧ ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳ ವಿವರ ಈ ಕೆಳಗಿನಂತಿರುತ್ತವೆ.

1) ದಿ:23.04.2021 ರಂದು ಡಿವೈ.ಎಸ್.ಪಿ ಶ್ರೀ ಪಾಂಡುರಂಗ ರವರ ಅಮಾನತಿಗೆ ಆಗ್ರಹಿಸಿ ಸುದ್ದಿಗೋಷ್ಠಿ ಮಾಡಿರುವ ಬಗ್ಗೆ.
2) ಪ್ರತಿವಾದಿಯು ಎಸ್.ಡಿ.ಪಿ.ಐ ಮುಂತಾದ ಸಂಘಟನೆಗೆ ಸೇರಿಕೊಂಡಿರುವ ಬಗ್ಗೆ.

ಈ ರೀತಿಯಾಗಿ ಸಾರ್ವಜನಿಕ ಅಧಿಕಾರಿಗಳ ವಿರುದ್ಧ ಖೊಟ್ಟಿ ಅರ್ಜಿಗಳನ್ನು ನೀಡಿ, ತಾನು ಎಷ್ಟು ಗಂಡಾಂತರಕಾರಿಯಾದ ವ್ಯಕ್ತಿ ಎಂದು ಬಲಪಡಿಸಲು ಪ್ರತಿಭಟನೆ ನಡೆಸುವ ಮೂಲಕ ಜನ ಸಾಮಾನ್ಯರಿಗೂ ಸಹ ನೆಮ್ಮದಿ ಜೀವನ ನಡೆಸದಂತೆ ಈ ರೀತಿ ಅಕ್ರಮ ಕೃತ್ಯಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದು, ಸಾರ್ವಜನಿಕ ಸೇವಾ ವಲಯದಲ್ಲೂ ಮತ್ತು ಸಾರ್ವಜನಿಕರಲ್ಲೂ ಅನಗತ್ಯವಾಗಿ ಭಯದ ವಾತಾವರಣ ನಿರ್ಮಿಸುವ ಮತ್ತು ಅದರ ಪರಿಣಾಮವಾಗಿ ಸಾರ್ವಜನಿಕ ಸುವ್ಯವಸ್ಥೆಗೆ ತೀವ್ರವಾದ ಧಕ್ಕೆ ತರುವ ಎಲ್ಲಾ ಅಂಶಗಳು ಮೇಲ್ನೋಟಕ್ಕೆ ಸಾಬೀತಾಗುತ್ತಿದ್ದು, ಕಾರಣ ಅರ್ಜಿದಾರರು ಎದುರುದಾರನ ವಿರುದ್ಧ ಸಲ್ಲಿಸಿದ ಅರ್ಜಿಯು ಪುರಸ್ಕಾರಕ್ಕೆ ಯೋಗ್ಯವಾಗಿರುತ್ತದೆ ಎಂದು ಅಭಿಪ್ರಾಯಪಟ್ಟು, 3ನೇ ಪರಿಗಣಿತ ಅಂಶಕ್ಕೆ ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

## ಆದೇಶ

ನಾನು ಕವಿತಾ ಎಸ್. ಮನ್ನಿಕೇರಿ, ಭಾ.ಆ.ಸೇ, ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ದಂಡಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ, ಕರ್ನಾಟಕ ಸರ್ಕಾರವು ಅಧಿಸೂಚನೆ ಸಂ. ಹೆಚ್‌ಡಿ/182/ಎಸ್‌ಎಸ್‌ಟಿ/2018, ದಿನಾಂಕ 07.12.2021 ಅಡಿಯಲ್ಲಿ ಪ್ರದತ್ತ ಮಾಡಿದ ಅಧಿಕಾರವನ್ನು ಬಳಸಿಕೊಂಡು ಕರ್ನಾಟಕ ಅಕ್ರಮ ಭಟ್ಟಿ ಸಾರಾಯಿ ಇಳಿಸುವವರ ಔಷಧ ಕಾನೂನು ಉಲ್ಲಂಘಿಸುವವರ ಜೂಜು ಕೋರರು ಗೂಂಡಾಗಳು, ಅನೈತಿಕ ವ್ಯವಹಾರಗಳು ವೃತ್ತಿಯಲ್ಲಿ ತೊಡಗುವವರ, ಕೊಳಚೆ ಪ್ರದೇಶದ ಅಕ್ರಮಣದಾರರು ಇವರ ಅಪಾಯಕಾರಿ ಚಟುವಟಿಕೆಗಳ ತಡೆ ಕಾಯ್ದೆ–1985 ಕಲಂ 3(1) ಅಡಿಯಲ್ಲಿ ಈ ಕೆಳಗಿನಂತೆ ಆದೇಶ ಮಾಡಿರುತ್ತೇನೆ.

1. ಅರ್ಜಿದಾರನ ಅರ್ಜಿಯನ್ನು ಪುರಸ್ಕರಿಸಲಾಯಿತು. ಎದುರುದಾರ ಹೆಚ್.ಶ್ರೀನಿವಾಸ್ @ ಬಾಳೆಕಾಯಿ ಸೀನ @ ಮಚ್ಚು ಸೀನ ಬಿನ್ ಲೇಟ್ ಹನುಮಂತಪ್ಪ, ಸುಮಾರು 39 ವರ್ಷದ ಆದಿ ದ್ರಾವಿಡ ಜನಾಂಗ, ವಾಸ 02ನೇ ಹಂತ, ರಾಜೀವ್ ಗಾಂಧಿ ಆಶ್ರಯ ಬಡಾವಣೆ, ಚಿತ್ರದುರ್ಗ ನಗರ ಇವರನ್ನು ಜಿಲ್ಲಾ ಕಾರಾಗೃಹ, ಚಿತ್ರದುರ್ಗ ನೇದ್ದರಲ್ಲಿ ಬಂಧನದಲ್ಲಿಡಲು ದಿನಾಂಕ:17–01–2022 ರಂದು ಆದೇಶಿಸಿರುತ್ತೇನೆ.
2. ಚಿತ್ರದುರ್ಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸದರಿ ಆದೇಶವನ್ನು ಜಾರಿಗೊಳಿಸಲು ಪೊಲೀಸ್ ಅಧಿಕಾರಿಯನ್ನು ನಿಯುಕ್ತಿಗೊಳಿಸಿ ಎದುರುದಾರನನ್ನು ಬಂಧಿಸಿ ಜಿಲ್ಲಾ ಕಾರಾಗೃಹ, ಚಿತ್ರದುರ್ಗನೇದ್ದರಲ್ಲಿ ಬಂಧನಕ್ಕೊಳಪಡಿಸಲು ಕ್ರಮ ಕೈಗೊಳ್ಳಲು ಈ ಮೂಲಕ ನಿರ್ದೇಶಿಸಿದೆ.
3. ಈ ಆದೇಶದ ಪೂರ್ಣ ಪ್ರಮಾಣದ ಪ್ರತಿಯನ್ನು ಹಾಗೂ ಅರ್ಜಿಯೊಂದಿಗೆ ಲಗತ್ತಿಸಿದ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ಎದುರುದಾರನಿಗೆ ಜಾರಿ ಮಾಡುವುದು.

4. ಆದೇಶವನ್ನು ಜಾರಿ ಮಾಡುವ ಪೊಲೀಸ್ ಅಧಿಕಾರಿಯು ಎದುರುದಾರನನ್ನು ಬಂಧಿಸಿದ ಸಮಯ... ಸ್ಥಾನಬದ್ಧತೆ ಆದೇಶವನ್ನು ಜಾರಿ ಮಾಡುವುದು ಮತ್ತು ಅದರಲ್ಲಿರುವ ಸಂಗತಿಗಳನ್ನು ಓದಿ, ಹೇ... ತಿಳಿಸುವುದು. ಜೊತೆಗೆ ಆತನಿಗೆ ಈ ಕೆಳಗಿನ ಅಂಶಗಳನ್ನು ಮನದಟ್ಟುಮಾಡಿಕೊಡುವುದು.

a) "ನೀವು ಈ ಆದೇಶದ ಬಗ್ಗೆ ನನಗೆ (ಸ್ಥಾನಬದ್ಧತೆ ಪ್ರಾಧಿಕಾರಿ) ಮನವಿಯನ್ನು ಸಲ್ಲಿಸಲು ಇಚ್ಛೆ ಪಟ್ಟಲ್ಲಿ ನೀನು ಮುಕ್ತವಾಗಿ ಅಂತಹ ಮನವಿಯನ್ನು ನೀನು ಬಂಧಿಯಾಗಿರುವ ಕಾರಾಗೃಹ ಅಧೀಕ್ಷಕರ ಮುಖಾಂತರ ಸಲ್ಲಿಸಬಹುದು.

b) ನಿನಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಿನ್ನನ್ನು ಬಂಧನದಲ್ಲಿಟ್ಟು 3 ವಾರದೊಳಗೆ ನಿಮ್ಮ ಸ್ಥಾನ ಬದ್ಧತೆಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಅಕ್ರಮ ಭಟ್ಟಿ ಸಾರಾಯಿ ವ್ಯವಹಾರ, ಔಷಧಾಪರಾಧ, ಜೂಜುಕೋರ, ಗೂಂಡಾ, ಅನೈತಿಕ ವ್ಯವಹಾರಗಳ ಅಪರಾಧ ಮತ್ತು ಕೊಳಚೆ ಪ್ರದೇಶಗಳನ್ನು ಅಕ್ರಮವಾಗಿ ಅಕ್ರಮಿಸಿಕೊಳ್ಳುವ ಚಟುವಟಿಕೆಗಳ ತಡೆ ಅಧಿನಿಯಮ, 1985ರ ಕಲಂ 9ರ ಪ್ರಕಾರ ರಚಿಸಲಾದ ಸಲಹಾ ಮಂಡಳಿಯ ಮುಂದೆ ಮಂಡಿಸಲಾಗುತ್ತದೆ. ಈ ಸಲಹಾ ಮಂಡಳಿ ಬಂಧನದ ದಿನಾಂಕದಿಂದ 7 ವಾರದ ಒಳಗ ನಿಮ್ಮನ್ನು ಬಂಧನದಲ್ಲಿಡಲು ಸಾಕಷ್ಟು ಆಧಾರಗಳಿವೆಯೇ ಎಂಬುದನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿಯನ್ನು ಮಂಡಿಸುತ್ತದೆ.

c) ಸದರಿ ಸಲಹಾ ಮಂಡಳಿಗೆ ನೀವು ಮನವಿಯನ್ನು ಸಲ್ಲಿಸಲು ಇಚ್ಛೆ ಪಟ್ಟಲ್ಲಿ ಅಂತಹ ಮನವಿಯನ್ನು ಅಧ್ಯಕ್ಷರು ಕರ್ನಾಟಕ ಅಕ್ರಮ ಭಟ್ಟಿ ಸಾರಾಯಿ ವ್ಯವಹಾರ, ಔಷಧಾಪರಾಧ, ಜೂಜುಕೋರ, ಗೂಂಡಾ, ಅನೈತಿಕ ವ್ಯವಹಾರಗಳ ಅಪರಾಧ ಮತ್ತು ಕೊಳಚೆ ಪ್ರದೇಶಗಳನ್ನು ಅಕ್ರಮವಾಗಿ ಅಕ್ರಮಿಸಿಕೊಳ್ಳುವ ಚಟುವಟಿಕೆಗಳ ತಡೆ ಅಧಿನಿಯಮ 1985 (1985 ಕರ್ನಾಟಕ ಕಾಯ್ದೆ ಸಂಖ್ಯೆ.(12) ರ ಅಡಿಯಲ್ಲಿ ರಚಿಸಲಾದ ಸಲಹಾ ಮಂಡಳಿ ಇವರಿಗೆ ನೀನು ಇರುವ ಕಾರಗೃಹ ಅಧೀಕ್ಷಕರವರ ಮುಖಾಂತರ ಸಲ್ಲಿಸಬಹುದು.

d) ನೀನು ಸಲಹಾ ಮಂಡಳಿಯ ಮುಂದೆ ಹಾಜರಾಗಿ ಮುಖತಃ ನಿನ್ನ ಅಹವಾಲನ್ನು ಸಲ್ಲಿಸಲು ಇಚ್ಛೆಪಟ್ಟಲ್ಲಿ ಅಂತಹ ಮನವಿಯನ್ನು ನೀನು ಇರುವ ಕಾರಾಗೃಹ ಅಧೀಕ್ಷಕರವರ ಮುಖಾಂತರ ಸಲ್ಲಿಸಬಹುದು. ಈ ಮನವಿಯನ್ನು ಸಲಹಾ ಮಂಡಳಿ ಮುಂದೆ ಹಾಜರುಪಡಿಸಲು ಏರ್ಪಾಡು ಮಾಡಲಾಗುವುದು. ನೀನು ನಿನ್ನ ಪರವಾಗಿ ಸಲಹಾ ಮಂಡಳಿ ಮುಂದೆ ನಿನ್ನ ಪರಿಚಯಸ್ಥರ ಅಥವಾ ಸಂಂದಿಕರು ಹಾಜರಾಗಬೇಕೆಂದು ಇಚ್ಛೆಪಟ್ಟಲ್ಲಿ ಅಂತಹ ಸ್ನೇಹಿತ ಅಥವ ಮಧ್ಯವರ್ತಿಯ ಹೆಸರನ್ನು ನೀನು ಇರುವ ಕಾರಾಗೃಹ ಅಧೀಕ್ಷಕರವರ ಮುಖಾಂತರ ನನಗೆ ಸಲ್ಲಿಸಿದರೆ ಅದನ್ನು ಸಲಹಾ ಮಂಡಳಿಯ ಮುಂದೆ ಮಂಡಿಸಲಾಗುವುದು. ಸಲಹಾ ಮಂಡಳಿಯು ನಿಗದಿ ಪಡಿಸಿದ ದಿನಾಂಕವನ್ನು ನಿಮಗೆ ತಿಳಿಸಲಾಗುವುದು. ಮತ್ತು ಆ ದಿನಾಂಕದಂದು ಪರಿಚಯಸ್ಥರು ಅಥವಾ ಸಂಬಂದಿಕರು ಸಲಹಾ ಮಂಡಳಿಯ ಮುಂದೆ ಹಾಜರಾಗಲು ಸಿದ್ಧರಿರಬೇಕು. ನಿಮ್ಮ ಪರಿಚಯಸ್ಥರು ಅಥವಾ ಸಂಬಂದಿಕರು ವಕೀಲರಾಗಿರಬಾರದು ಹಾಗೂ ನಿಮ್ಮ ವೃತ್ತಿ ಬಾಂಧವರಾಗಿರಬಾರದು".

ಸದರಿ ಆದೇಶವನ್ನು ಜಾರಿ ಮಾಡಿ ಎದುರುದಾರನನ್ನು ಸದರಿ ಕಾರಾಗೃಹದಲ್ಲಿ ಬಂಧನಕ್ಕೊಳಪಡಿಸಿದ ಬಗ್ಗೆ ಪಾಲನಾ ವರದಿಯನ್ನು ಸಲ್ಲಿಸುವುದು.

(ಕವಿತಾ ಎಸ್. ಮನ್ನಿಕೇರಿ, ಭಾ.ಆ.ಸೇ)
ಜಿಲ್ಲಾಧಿಕಾರಿಗಳು ಹಾಗೂ
ಜಿಲ್ಲಾ ದಂಡಾಧಿಕಾರಿಗಳು,
ಚಿತ್ರದುರ್ಗ ಜಿಲ್ಲೆ.

ಗೆ,

1. ಪೊಲೀಸ್ ಅಧೀಕ್ಷಕರು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.
2. ಅಧೀಕ್ಷಕರು, ಜಿಲ್ಲಾ ಕಾರಾಗೃಹ, ಚಿತ್ರದುರ್ಗ ಜಿಲ್ಲೆ.
3. ಪೊಲೀಸ್ ಉಪಾಧೀಕ್ಷಕರು, ಚಿತ್ರದುರ್ಗ ನಗರ ಉಪ ವಿಭಾಗ, ಚಿತ್ರದುರ್ಗ.
4. ಪೊಲೀಸ್ ನಿರೀಕ್ಷಕರು, ಕೋಟೆ ಪೊಲೀಸ್ ಠಾಣೆ, ಚಿತ್ರದುರ್ಗ, ಇವರಿಗೆ ಜಾರಿಗಾಗಿ ಕಳುಹಿಸಲಾಗಿದೆ.

ಪ್ರತಿಯನ್ನು : ಜಾರಿ ಮಾಡುವ ಅಧಿಕಾರಿಯ ಮೂಲಕ ಹೆಚ್.ಶ್ರೀನಿವಾಸ್ @ ಬಾಳೆಕಾಯಿ ಸೀನ @ ಮಚ್ಚು ಸೀನ ಲೇಟ್ ಹನುಮಂತಪ್ಪ, ಸುಮಾರು 39 ವರ್ಷದ ಆದಿ ದ್ರಾವಿಡ ಜನಾಂಗ, ವಾಸ 02ನೇ ಹಂತ, ರಾಜೀವ್ ಗಾಂಧಿ ಆಶ್ರಯ ಬಡಾವಣೆ, ಚಿತ್ರದುರ್ಗ ನಗರ.